ಕನ್ನಡದ ಶಕ್ತಿ

ಜಯದೇವಿತಾಯಿ ಲಿಗಾಡೆ



ಡಾ. ಕಲ್ಯಾಣಮ್ಮ ಲಂಗೋಟಿ

॥ ಓಂ ಶ್ರೀಗುರು ಬಸವಲಿಂಗಾಯ ನಮಃ ॥

ಬಸವ ಜಯಂತಿ ಶತಮಾನೋತ್ಸವದ ಪ್ರಕಟಣೆ (೧೯೧೩-೨೦೧೩)

ಜಯದೇವಿತಾಯಿ ಲಿಗಾಡೆ ಅವರ ಜನ್ಮ ಶತಮಾನೋತ್ಸವ (೧೯೧೨-೨೦೧೩)

ಕನ್ನಡದ ಶಕ್ತಿ

ಜಯದೇವಿತಾಯಿ ಲಿಗಾಡೆ

(ಜೀವನ - ವಿಚಾರಗಳು)

[ಜನನ : ೨೩-೦೬-೧೯೧೨ ಲಿಂಗೈಕ್ಯ : ೧೫-೦೭-೧೯೮೬]

ಡಾ. ಕಲ್ಯಾಣಮ್ಮ ಲಂಗೋಟಿ

ಎಂ. ಎ. (ಕನ್ನಡ), ಪಿಎಚ್.ಡಿ.

ಸಿ. ವಾಯ್. ಇಡಿ. (ಯೋಗ)

ರಾಮದುರ್ಗ-೫೯೧ ೧೨೩ ಜಿ. : ಬೆಳಗಾವಿ

೨೦೧೨

ಜಗಜ್ಯೋತಿ ಬಸವೇಶ್ವರ ಅನುಭಾವಪೀಠ

ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ

ಕನ್ನಡದ ಶಕ್ತಿ

ಜಯದೇವಿತಾಯಿ ಲಿಗಾಡೆ

(ಜೀವನ ಸಾಧನೆ) (೧೯೧೨ - ೧೯೮೬)

ಲೇಖಕರು : ಡಾ. ಕಲ್ಯಾಣಮ್ಮ ಲಂಗೋಟಿ

ಎಂ. ಎ. (ಕನ್ನಡ), ಪಿಎಚ್.ಡಿ., ಪಿ. ವಾಯ್. ಇಡಿ. (ಯೋಗ)

ಮುಖ್ಯಸ್ಥರು, ಕನ್ನಡ ವಿಭಾಗ

ಸಿ. ಎಸ್. ಬೆಂಬಳಗಿ ಕಲಾ, ಶಾ. ಎಂ. ಆರ್. ಪಾಲರೇಶಾ ವಿಜ್ಞಾನ

ಹಾಗೂ ಜಿ. ಎಲ್. ರಾಠಿ ವಾಣಿಜ್ಯ ಮಹಾವಿದ್ಯಾಲಯ,

ರಾಮದುರ್ಗ-೫೯೧ ೧೨೩ ಜಿ. : ಬೆಳಗಾವಿ

ಹಕ್ಕುಗಳು : ಲೇಖಕರವು

ಪ್ರಕಾಶಕರು : ಜಗಜ್ಯೋತಿ ಬಸವೇಶ್ವರ ಅನುಭಾವ ಪೀಠ

ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ

ಪ್ರತಿಗಳು : ೧,೦೦೦

ಪುಟಗಳು : viii + ೪೬

ಮೊದಲನೆಯ ಮುದ್ರಣ : ೨೦೦೨

ಎರಡನೆಯ ಮುದ್ರಣ : ೨೦೧೨

ಜಯದೇವಿತಾಯಿ ಲಿಗಾಡೆ ಅವರ ಜನ್ಮ ಶತಮಾನೋತ್ಸವ (೧೯೧೨-೨೦೧೩)

ಬೆಲೆ : ಮೂವತ್ತು ರೂಪಾಯಿಗಳು (೩೦-೦೦)

ಮುದ್ರಕರು : ಶ್ರೀ ಹುಚ್ಚೇಶ್ವರ ಆಫ್‌ಸೆಟ್ ಪ್ರಿಂಟರ್ಸ್,

ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ

ದೂರವಾಣಿ : ೦೮೩೩೫-೨೪೧೦೬೩

ಅರ್ಪಣೆ



ವಿಶ್ವಗುರು ಬಸವಣ್ಣನವರು



ಶಿವಯೋಗಿ ಸಿದ್ಧರಾಮೇಶ್ವರರು

ಲೇಖಕರ ನಿವೇದನೆ

ಕಲ್ಯಾಣ ನಾಡು, ಕಲ್ಯಾಣ ಕರ್ನಾಟಕ, ಹೈದರಾಬಾದ ಕರ್ನಾಟಕ ಎಂದೇ ಕರೆಯಲ್ಪಡುತ್ತಿರುವ ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಬೀರಗಿ (ಬಿ) ಎಂಬ ಹಳ್ಳಿಯಲ್ಲಿ ೧೯೩೬ ಫೆಬ್ರುವರಿ ೫ ರಂದು ಜನಿಸಿದ ನನಗೆ ಕನ್ನಡ ಶಾಲೆಗೆ ಹೆಸರು ಹಚ್ಚಿ, ಕನ್ನಡ ಓದು-ಬರಹ ಕಲಿಸಿದವರು ನನ್ನ ತಂದೆ ಹಾವಪ್ಪ ಮಾಸ್ತರ ಹಾಗೂ ತಾಯಿ ಅನ್ನಪೂರ್ಣಮ್ಮ. ನನ್ನ ತಂದೆಯವರು ಬಾಲ್ಯದಲ್ಲಿ ಭಾಲ್ಕಿ ಹಿರೇಮಠದ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವಾಗ, ೧೯೪೭-೪೮ ರಲ್ಲಿ ಭಾರತದ ಒಕ್ಕೂಟದಲ್ಲಿ ಸೇರ್ಪಡೆಯಾಗಲಿಚ್ಛಿಸದ ಹೈದ್ರಾಬಾದ ನಿಜಾಮ ಪ್ರಾಂತವು, ಕಾಸೀಮ ರಜವಿ ಎಂಬ ಉಗ್ರ ರಜಾಕಾರರ ದಾಳಿಯಲ್ಲಿ ಸಹಸ್ರಾರು ಜನ ಪ್ರಾಣ ಕಳೆದುಕೊಂಡರು. ಊರು- ಕೇರಿ ತೊರೆದರು. ಆಗ ಭಾಲ್ಕಿಯ ಪೂಜ್ಯ ಶ್ರೀ ಚೆನ್ನಬಸವ ಪಟ್ಟದ್ದೇವರು ತಮ್ಮ ಮಠದ ವಿದ್ಯಾರ್ಥಿಗಳೊಂದಿಗೆ ಬೀದರ ಜಿಲ್ಲೆ ತೊರೆದು ಮುಂಬೈ-ಕರ್ನಾಟಕದ ಸೊಲ್ಲಾಪುರಕ್ಕೆ ಬಂದು ಜಯದೇವಿತಾಯಿ ಲಿಗಾಡೆ ಅವರ ಆಶ್ರಯದಲ್ಲಿ ಉಳಿದರು. ತಾಯಿಯವರು ಈ ಕನ್ನಡದ ಮಕ್ಕಳಿಗೆ ಅನ್ನ-ಅರಿವೆ-ಆಶ್ರಯವಿತ್ತು ಸಲಹಿದರು. ನನ್ನ ತಂದೆಯವ- ರಿಂದ ಜಯದೇವಿ ತಾಯಿಯವರ ಗುಣಗಾನ ಕೇಳಿ ಭಕ್ತಿ-ಭಾವ ತಾಳಿದ್ದೆ.

ಪ್ರಾಥಮಿಕ ವಿದ್ಯಾಭ್ಯಾಸ ಪೂರೈಸಿ, ಧಾರವಾಡಕ್ಕೆ ಬಂದು ಜಯದೇವಿತಾಯಿ ಲಿಗಾಡೆ ಹೈಸ್ಕೂಲಿನಲ್ಲಿ ಒಂದು ವರ್ಷ ಓದುವ ಭಾಗ್ಯ ನನ್ನದಾಗಿತ್ತು. ಮುಂದೆ ಧಾರವಾಡದಲ್ಲಿ ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಬಿ.ಎ., ಎಂ.ಎ. (ಕನ್ನಡ) ಪದವಿ ಗಳನ್ನು ಪಡೆದೆ. ನಾನು ವಿದ್ಯಾರ್ಥಿಯಾಗಿದ್ದಾಗ, ಧಾರವಾಡಕ್ಕೆ ಜಯದೇವಿ ತಾಯಿಯವರು ಆಗಾಗ ಬಂದಾಗಲೆಲ್ಲ, ಅವರ ದರ್ಶನ, ಭಾಷಣ ಕೇಳುತ್ತ ಬೆಳೆದೆ. ಅನಂತರ ರಾಮದುರ್ಗ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕಿಯಾದ ನಂತರ, ೧೯೮೦ ರಿಂದ ೧೯೮೬ರ ವರೆಗೆ ಬಸವಕಲ್ಯಾಣ ಅನುಭವ ಮಂಟಪದ ಶರಣ-ಕಮ್ಮಟ ಶಿಬಿರಗಳಿಗೆ ಹೋದಾಗಲೆಲ್ಲ ಜಯದೇವಿತಾಯಿಯವರ 'ಭಕ್ತಿ ಭವನ'ದಲ್ಲಿಯೇ ವಾಸ್ತವ್ಯ. ತಾಯಿ ಯವರೊಂದಿಗೆ ಚಿಂತನ, ಅವರ ಜೀವಾನುಭವಗಳನ್ನೆಲ್ಲ ಕೇಳುವ ಭಾಗ್ಯ ನಮಗೆ ಲಭಿಸಿತು.

೧೯೮೬ ರಲ್ಲಿ ಜಯದೇವಿತಾಯಿಯವರು ಲಿಂಗೈಕ್ಯರಾದ ನಂತರ ೨೦೦೨ ರಲ್ಲಿ ಸೊಲ್ಲಾಪುರದಲ್ಲಿ ಈ ಕೃತಿಯ ಮೊದಲ ಮುದ್ರಣ ಲೋಕಾರ್ಪಣೆ ಮಾಡಲಾಯಿತು. ಈಗ ಶತಮಾನೋತ್ಸವ ಸಂದರ್ಭದಲ್ಲಿ ಎರಡನೆಯ ಮುದ್ರಣ ಪ್ರಕಟಿಸಲಾಗುತ್ತಿದೆ.

ಈ ಕೃತಿಯ ರಚನೆಗೆ ಪ್ರೇರಣೆ ನೀಡಿದ ಸಿದ್ಧಣ್ಣ ಲಂಗೋಟಿ ಅವರಿಗೆ, ಅಂದವಾಗಿ ಮುದ್ರಿಸಿದ ಶ್ರೀ ಹುಚ್ಚೇಶ್ವರ ಆಫ್‌ಸೆಟ್ ಪ್ರಿಂಟರ್ಸ್‌ನವರಿಗೂ ನನ್ನ ಅನಂತ ಶರಣುಗಳು.

ರಾಮದುರ್ಗ
-ಡಾ. ಕಲ್ಯಾಣಮ್ಮ ಲಂಗೋಟಿ

೦೧-೦೮-೨೦೧೨

ಪರಿವಿಡಿ

ಕನ್ನಡದ ಶಕ್ತಿ ಜಯದೇವಿತಾಯಿ ಲಿಗಾಡೆ

(ಜೀವನ-ಸಾಧನೆ)

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಕನ್ನಡದ ಶಕ್ತಿ

ಜಯದೇವಿತಾಯಿ ಲಿಗಾಡೆ

೧. ಸಿದ್ಧರಾಮನ ಕರುಣೆಯ ಕೂಸು :

ಹನ್ನೆರಡನೆಯ ಶತಮಾನವು ಜಾಗತಿಕ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಕಂಗೊಳಿಸಿದ ಶತಮಾನವಾಗಿದೆ. ಸಕಲಜೀವ ರಾಶಿಗಳ ಲೇಸಿಗಾಗಿ, ಮಾನವಕುಲದ ಕಲ್ಯಾಣಕ್ಕಾಗಿ 'ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ' ಯಾರೂ ಕಂಡರಿಯದ, ಕೇಳರಿಯದ ಕ್ರಾಂತಿಯೊಂದು ಜರುಗಿತು, ಅದುವೇ ಬಸವಾದಿ ಶರಣರ ಕಲ್ಯಾಣ ಕ್ರಾಂತಿ.

ಸಾವಿರಾರು ವರುಷಗಳಿಂದ ನಡೆದು ಬಂದಿದ್ದ ವರ್ಣಾಶ್ರಮದ ಜಾತಿ ಪದ್ಧತಿ, ಶೋಷಣೆಗಳ ವಿರುದ್ಧ ಬಂಡೆದ್ದ ಅರಿವಿನ ಶರಣರು ವರ್ಣಭೇದ, ಆಶ್ರಮ-ಭೇದ, ಲಿಂಗಭೇದಗಳನ್ನೆಲ್ಲ ತೊಡೆದು ಹಾಕಿ, ಜಾತಿ ರಹಿತ-ಧರ್ಮಸಹಿತವಾದ ಹೊಸ ಧರ್ಮ ಸಮಾಜವನ್ನು ರೂಪಿಸಿದರು.

ಬಸವಣ್ಣನವರು ಸ್ಥಾಪಿಸಿದ ಕಲ್ಯಾಣದ 'ಅನುಭವ ಮಂಟಪ'ವು ವಿಪ್ರ-ಮೊದಲು ಅಂತ್ಯಜ ಕಡೆಯಾಗಿ ಸ್ತ್ರೀ-ಪುರುಷರೆನ್ನದೇ ಸರ್ವರಿಗೂ ಮುಕ್ತ ಅವಕಾಶವನ್ನು ಕಲ್ಪಿಸಿತು.

ಪ್ರಪಂಚದ ಜನಸಂಖ್ಯೆಯ ಅರ್ಧಭಾಗವಾಗಿರುವ ಸ್ತ್ರೀಯರನ್ನು ಚಾತುರ್ವರ್ಣ ವ್ಯವಸ್ಥೆಯಿಂದಲೂ ಹೊರಹಾಕಿ, ಪಂಚಮವರ್ಣಕ್ಕೆ ನೂಕಿ, ಅವಳನ್ನು ಪುರುಷನ ದಾಸಿ, ಭೋಗವಸ್ತು, ದಾನದ ವಸ್ತು, ಮಾಯೆ, ಮಲದಭಾಂಡ ಎಂದು ಕರೆದು ಶೋಷಣೆ ನಡೆಸಿದ ಕಾಲದಲ್ಲಿ ಸ್ತ್ರೀ ಕುಲೋದ್ಧಾರಕ ಗುರು ಬಸವಣ್ಣನವರು ಸ್ತ್ರೀ-ಪುರುಷರಿಬ್ಬರೂ ಸಮಾನರು ಎಂದು ಸಾರಿದರು. ಅಡಿಗೆಮನೆ-ಹೆರಿಗೆಮನೆ-

ಗಳಿಗಷ್ಟೇ ಮೀಸಲಾಗಿದ್ದ ಸ್ತ್ರೀಯರ ಬಾಳಿಗೆ-'ಮರ್ತ್ಯಲೋಕದ ಅರಿವಿನ ಮಹಾಮನೆ'ಯ ದರ್ಶನ ಮಾಡಿಸಿದರು. ಸೊನ್ನಲಿಗೆಯಿಂದ ಕಲ್ಯಾಣದ ಅನುಭವ ಮಂಟಪಕ್ಕೆ ಆಗಮಿಸಿದ್ದ ಶಿವಯೋಗಿ ಸಿದ್ಧರಾಮರು ಸ್ತ್ರೀಯರನ್ನು ಅತ್ಯುನ್ನತ ಗೌರವ ದಿಂದ ಕಂಡಿರುವುದನ್ನು ನೋಡುತ್ತೇವೆ.

ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು,
ತಾ ಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು,
ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಿಗೆಯನೇರಿತ್ತು,
ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು,
ಅದು ಕಾರಣ ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ,
ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ !

ಈ ರೀತಿಯಾಗಿ ಹೆಣ್ಣನ್ನು ಸಾಕ್ಷಾತ್ ದೇವರೆಂದು ಗೌರವಿಸಿದ ಶರಣ ಸಿದ್ಧರಾಮನ ಜನ್ಮಭೂಮಿ ಸೊನ್ನಲಾಪುರ (ಇಂದಿನ ಸೋಲಾಪುರ)ದಲ್ಲಿ ಎಂಟು ನೂರು ವರುಷಗಳ ನಂತರ ಒಂದು ದಿವ್ಯ ಸ್ತ್ರೀರತ್ನ ಜನಿಸಿತು- ಅದುವೇ ಪೂಜ್ಯ ಶರಣೆ ಜಯದೇವಿತಾಯಿ ಲಿಗಾಡೆ ಎಂಬ ಹೆಸರಿನಿಂದ ಸುವಿಖ್ಯಾತವಾಯಿತು.

೨. ವಾರದ-ಮಡಕಿ-ಲಿಗಾಡೆ ಮನೆತನಗಳು :

ಸೊಲ್ಲಾಪುರ ಮಹಾನಗರದ ಮೂರು ಶ್ರೀಮಂತ ಮನೆತನಗಳ ಹೆಸರನ್ನು ನಾಡಿನಾದ್ಯಂತ ಬೆಳಗಿಸಿದ ಕೀರ್ತಿ ಈ ಜಯದೇವಿತಾಯಿಗೆ ಸಲ್ಲುತ್ತದೆ.

ಭಾರತದ ಸ್ವಾತಂತ್ರ್ಯ ಪೂರ್ವದಲ್ಲಿ ಸಾಮಾಜಿಕ, ಧಾರ್ಮಿಕ, ರಾಜಕೀಯ ರಂಗಗಳಲ್ಲಿ ಬಹು ದೊಡ್ಡ ಹೆಸರು ಗಳಿಸಿದವರು ಶ್ರೀ ವಾರದ ಮಲ್ಲಪ್ಪನವರು, ಬ್ರಿಟಿಷರೂ ಸಹ ಇವರ ಪ್ರೀತಿ-ವಿಶ್ವಾಸಗಳಿಸಲು 'ರಾವಬಹದ್ದೂರ' ಎಂಬ ಪದವಿ ನೀಡಿ ಗೌರವಿಸಿದ್ದರು. ಅಂದಿನ ಕಾಲದಲ್ಲಿ ಶೂದ್ರರೆಂದೇ ಪರಿಗಣಿಸುತ್ತಿದ್ದ ಲಿಂಗಾಯತರಿಗೆ 'ಸಂಸ್ಕೃತ ಜ್ಞಾನ'ವಾಗಬೇಕೆಂದು ಸಂಸ್ಕೃತ ಪಾಠಶಾಲೆ-ಉಚಿತ ಬೋರ್ಡಿಂಗ್ ಪ್ರಾರಂಭಿಸಿ ೩೦೦-೪೦೦ ವಿದ್ಯಾರ್ಥಿಗಳಿಗೆ ಪ್ರಸಾದ-ದಾಸೋಹ ನಡೆಸುತ್ತಿದ್ದ ಹೃದಯ ಶ್ರೀಮಂತರೂ ಆಗಿದ್ದರು. ವ್ಯಾಪಾರ-ಉದ್ದಿಮೆಯಲ್ಲಿ ಬಹುದೊಡ್ಡ ಹೆಸರು ಇವರದು. ಲಿಂಗಾಯತ ಸಮಾಜದ ಧುರೀಣರೂ ಆಗಿದ್ದರು. ಶ್ರೀಮಂತ ಶ್ರೀ ವಾರದ ಮಲ್ಲಪ್ಪನವರಿಗೆ ಮೊದಲನೇ ಹೆಂಡತಿಯಿಂದ

ಮಕ್ಕಳಾಗಲಿಲ್ಲವಾದ್ದರಿಂದ, ಪತ್ನಿಯ ಸೋದರನಾದ ಚೆನ್ನಬಸಪ್ಪ ಮಡಕಿ ಇವನನ್ನು (ಅಳಿಯನನ್ನು) ಮಗನಂತೆ ಅಕ್ಕರೆಯಿಂದ ಜೋಪಾನ ಮಾಡಿದರು. ಅನೇಕ ವರ್ಷಗಳ ನಂತರ ಎರಡನೆಯ ಹೆಂಡತಿ ಗೌರವ್ವಳಿಗೆ ಇಬ್ಬರು ಹೆಣ್ಣು, ಒಬ್ಬ ಗಂಡು ಮಗ ಜನಿಸಿದರು.

ಮಡಕಿ ಮನೆತನವೂ ಆ ಕಾಲದಲ್ಲಿ ವೈಭವದಿಂದ ಮೆರೆಯುತ್ತಿತ್ತು. ಈ ಮನೆತನದ ಶರಣಪ್ಪ-ರುದ್ರಮ್ಮ ದಂಪತಿಗಳ ಮಗುವೇ ಚನ್ನಬಸಪ್ಪ ಮಡಕಿಯವರು. ಈ ಅಳಿಯನಿಗೆ ವಾರದ ಮಲ್ಲಪ್ಪನವರು ತಮ್ಮ ಮಗಳನ್ನು ಕೊಟ್ಟು ಲಗ್ನ ಮಾಡಿದರು. ಅನಾರೋಗ್ಯದಿಂದ ಮಗಳು ತೀರಿಕೊಳ್ಳಲು ಅಳಿಯನಿಗೆ ಅಕ್ಕಮ್ಮ ಭಾಗೀರಥಿ (ಸಂಗವ್ವ) ಮತ್ತು ಗೌರವ್ವ ಎಂಬ ಮೂರು ಕನ್ಯೆಯರನ್ನು ನಿಶ್ಚಯಿಸಿ ಲಗ್ನ ಮಾಡಿದರು. ಭಾಗಿರಥಿಬಾಯಿಗೆ ತಮ್ಮ ನಿಧನಳಾದ ಮಗಳ ಹೆಸರನ್ನೇ ಇಟ್ಟು 'ಸಂಗವ್ವ' ಎಂದು ಕರೆದರು.

ಈ ಚೆನ್ನಬಸಪ್ಪ-ಸಂಗವ್ವ ದಂಪತಿಗಳಿಗೆ ಹದಿಮೂರು ಜನ ಮಕ್ಕಳಾದರು. ಮೊದಲ ಎರಡು ಗಂಡು ಮಕ್ಕಳ ನಂತರ ಜನಿಸಿದ ಹೆಣ್ಣು ಮಗುವೇ ಜಯದೇವಿಯು.

ಜಯದೇವಿಯು ಅಜ್ಜ ವಾರದಮಲ್ಲಪ್ಪನವರ ವೈಭವೋಪೇತ 'ಇಂದ್ರಭವನ'ದಲ್ಲಿ ಜನಿಸಿದರು. (ಇಂದು ಈ ಮನೆ ಮಹಾನಗರ ಪಾಲಿಕೆಯಾಗಿದೆ) **ದಿನಾಂಕ ೨೩-೬-೧೯೧೨** ರಲ್ಲಿ ಜನಿಸಿದ ಜಯದೇವಿಯವರು ಸುಸಂಸ್ಕೃತ ಶರಣ ಪರಂಪರೆಯ ಎರಡೂ ಮನೆತನಗಳ ಕಣ್ಮಣಿಯಾಗಿ ಬೆಳೆದರು. ವಾರದ ಮಲ್ಲಪ್ಪನವರು ಸೊಲ್ಲಾಪುರದ ಹೆಣ್ಣು ಮಕ್ಕಳಿಗಾಗಿ 'ಮಹಿಳಾಜ್ಞಾನ' ಮಂದಿರ ಸ್ಥಾಪಿಸಿದರು. ಮಲ್ಲಪ್ಪ ನವರ ಪತ್ನಿಯಾದ ಬಸವ್ವಬಾಯಿ, ಹಾಗೂ ಗೌರವ್ವಬಾಯಿಯವರು ಅಧ್ಯಕ್ಷೆಯರಾಗಿ, ಸಂಗವ್ವಬಾಯಿ ಮಡಕಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಮಗು ಜಯದೇವಿಯು ಈ ಕಾರ್ಯ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಾ-ವಚನಗಳನ್ನು, ಭಕ್ತಿಗೀತೆಗಳನ್ನು ಹಾಡುತ್ತಾ ಬೆಳೆದರು. ತಾಯಿಯವರಿಂದ ಲಿಂಗಪೂಜಾನಿಷ್ಠೆ ಬೆಳೆಸಿ-ಕೊಂಡರು, ಶಿವಯೋಗಿ ಸಿದ್ಧರಾಮನ ದೇವಾಲಯಕ್ಕೆ ಗೆಳತಿಯರೊಂದಿಗೆ, ತಾಯಿ ಯೊಂದಿಗೆ ಹೋಗಿ ಬರುತ್ತಿದ್ದರು. ಸಿದ್ಧರಾಮ ಬಾಲಕಿ ಜಯದೇವಿಯ ಆರಾಧ್ಯದೈವ ವಾದ, ಮಂತ್ರ ಪುರುಷನಾದ.

೩. ನಾಲತ್ವಾಡದ ವೀರೇಶ್ವರ ಶರಣರ ಶುಭಹಾರೈಕೆ :

ಬಸವಭಕ್ತಿ ಸಂಪನ್ನ, ಧೀರ ಗಣಾಚಾರಿ ನಾಲತ್ವಾಡದ ವೀರೇಶ್ವರ ಶರಣರು

ನಾಲತ್ವಾಡ ತೊರೆದು, ಶಿವಯೋಗಿ ಸಿದ್ಧರಾಮನ ದಿವ್ಯಕ್ಷೇತ್ರ ವಾಗಿರ್ದ ಸೋಲಾಪುರಕ್ಕೆ ಬಂದು ನೆಲೆಸಿದ್ದರು. ಅಲ್ಲಿ 'ಪ್ರಸಾದ ದಾಸೋಹ' ನಡೆಸುತ್ತಿದ್ದರು. ೫-೬ ವರುಷದ ಬಾಲಕಿಯಾಗಿದ್ದ ಜಯದೇವಿಯು ತನ್ನ ತಾಯಿ-ತಂದೆಯೊಂದಿಗೆ ಶರಣರ ಮಹಾಮನೆಗೆ ಪ್ರಸಾದ ಸ್ವೀಕರಿಸಲು ಹೋಗುತ್ತಿದ್ದರು. ಅಲ್ಲಿ ಒಂದು ಸಲ ಈ ಬಾಲಕಿಯು ಕರಸ್ಥಲದಲ್ಲಿ ಇಷ್ಟಲಿಂಗ ಹಿಡಿದು ತನ್ಮಯಳಾಗಿ ಶಿವಯೋಗದಲ್ಲಿ ಮಗ್ನಳಾಗಿಬಿಟ್ಟಳು. ಅದನ್ನು ಕಂಡ ವೀರೇಶ್ವರ ಶರಣರು – 'ಈ ದೊಡ್ಡವ್ವನ ಲಿಂಗನಿಷ್ಠೆ ದೊಡ್ಡದು ನೋಡಿರೆವ್ವಾ' ಎಂದು ಆನಂದದಿಂದ ನುಡಿದರು. ಶರಣರ ಈ ಶುಭ ಹಾರೈಕೆಯಂತೆ ಈ ಬಾಲಕಿ ಜಯದೇವಿ ಮುಂದೆ ಇಡೀ ನಾಡಿಗೆ ದೊಡ್ಡವ್ವಳೇ ಆದರು. 'ಬೆಳೆಯುವ ಸಿರಿ ಮೊಳಕೆಯಲ್ಲೇ ನೋಡು' ಎಂಬ ಗಾದೆಯು ನೆನಪಿಗೆ ಬರುತ್ತದೆ.

೪. ಜಯದೇವಿತಾಯಿಯ ವಿದ್ಯಾಭ್ಯಾಸ :

ಬಾಲಕಿ ಜಯದೇವಿಯು ಮರಾಠಿ ೬ನೇ ವರ್ಗದವರೆಗೆ ಶಾಲೆ ಕಲಿತಳು. ಅಂದು ಕನ್ನಡ ಶಾಲೆಗಳು ಇಲ್ಲದ್ದರಿಂದ ಓದು-ಬರಹ ಮರಾಠಿಯಲ್ಲಿಯೇ ನಡೆಯಿತು. ತಾಯಿ ಸಂಗವ್ವಳು ಮನೆಯಲ್ಲಿ ಪ್ರೌಢ ಸ್ತ್ರೀಯರನ್ನು ಸೇರಿಸಿಕೊಂಡು ಶರಣರ ಪುರಾಣ-ಕೀರ್ತನೆ ಹೇಳುತ್ತಿದ್ದರು. ಊರಿನ ಬಡ ಹೆಣ್ಣು ಮಕ್ಕಳಿಗೆ ಹೆರಿಗೆ ಮಾಡಿಸುತ್ತಿದ್ದರು. ಸಮಾಜಸೇವೆಯಲ್ಲಿ ನಿರತರಾಗಿದ್ದರು. ತಾಯಿಯ ಸೇವಾಭಾವನೆ, ಲಿಂಗಪೂಜಾನಿಷ್ಠೆ, ಮಗಳು ಜಯದೇವಿಯಲ್ಲಿಯೂ ರೂಪು ಪಡೆಯಿತೆನ್ನಬಹುದು.

೫. ಮೂಢ ನಂಬಿಕೆ-ಮಾಟ-ಮಂತ್ರಗಳ ಬಗ್ಗೆ ನಂಬಿಕೆ ಇಲ್ಲದ್ದು :

ಅಂದು ಸಮಾಜದಲ್ಲಿ ಅಜ್ಞಾನ, ಅನಕ್ಷರತೆ, ಬಡತನ ತುಂಬಿಕೊಂಡ ಕಾಲದಲ್ಲಿ ತಾಯಿ ಸಂಗವ್ವಳು ಜನತೆಯಲ್ಲಿ ಮನೆ ಮಾಡಿದ್ದ ಮೂಢನಂಬಿಕೆ, ಮಾಟ, ಮಂತ್ರ, ಕಂದಾಚಾರಗಳ ಭಯವನ್ನು ತಿಳಿವಳಿಕೆ ನೀಡಿ ತೊಡೆದು ಹಾಕುತ್ತಿದ್ದರು. ತಾಯಿಯ ಧೈರ್ಯ, ನಿರ್ಭಯತೆ, ತತ್ವನಿಷ್ಠೆ ಮಗಳಲ್ಲಿ ಬಾಲ್ಯದಿಂದಲೇ ಮೈಗೂಡಿದ್ದವು.

೬. ಜಯದೇವಿತಾಯಿಯ ಕಲ್ಯಾಣ ಮಹೋತ್ಸವ :

ಅರಿವು-ಆಚಾರಸಂಪನ್ನ, ಭಕ್ತಿ ಸಂಪನ್ನಳಾದ ಜಯದೇವಿಗೆ ಹನ್ನೆರಡು ವರುಷ ತುಂಬುತ್ತಲೇ, ಇವರ ಮನೆಯ ಹತ್ತಿರದಲ್ಲಿಯೇ ಇರುವ ಲಿಗಾಡೆ ಮನೆತನದವರು ತಮ್ಮ ಮನೆಗೆ ಸೊಸೆಯನ್ನಾಗಿ ಮಾಡಿಕೊಳ್ಳಲು ನಿರ್ಧರಿಸಿದರು. ಲಿಗಾಡೆ ಮನೆತನವು ಅಂದು ಸೊಲ್ಲಾಪುರದಲ್ಲಿ ವಾರದ ಹಾಗೂ ಮಡಕಿ

ಮನೆತನಗಳಂತೆಯೇ ಪ್ರತಿಷ್ಠಿತ ಶ್ರೀಮಂತ ಮನೆತನವಾಗಿತ್ತು. ೩೦೦೦ ಎಕರೆ ಜಮೀನು ಎಸ್ಟೇಟ್, ಮನೆ, ಅಂಗಡಿ ಲೇವಾದೇವಿ ಇತ್ತು. ಆಗರ್ಭ ಶ್ರೀಮಂತಿಕೆ ಅವರದಿತ್ತು.

ಲಿಗಾಡೆ ಮನೆತನದ ಚೆನ್ನಮಲ್ಲಪ್ಪ ಮತ್ತು ಮೈನಾಬಾಯಿ ಇವರಿಗೆ ಮಲ್ಲಿಕಾರ್ಜುನ, ಅಡಿವೆಪ್ಪ, ನಾಗಪ್ಪ, ತಂಗೆವ್ವ ಎಂದು ನಾಲ್ಕು ಜನ ಮಕ್ಕಳು. ಮಲ್ಲಿಕಾರ್ಜುನಪ್ಪನಿಗೆ ಆರು ಜನ ಹೆಂಡಂದಿರು ಇದ್ದರಂತೆ. ಅವರಲ್ಲಿ ಸಿದ್ದವ್ವ ಎಂಬ ಐದನೇ ಹೆಂಡತಿಗೆ ಚೆನ್ನಮಲ್ಲಪ್ಪ ಹಾಗೂ ಜಯದೇವಪ್ಪ ಎಂಬ ಇಬ್ಬರು ಗಂಡು ಮಕ್ಕಳು ಜನಿಸಿದರು. ಉಳಿದವರಿಗೆ ಗಂಡು ಮಕ್ಕಳಾಗಲಿಲ್ಲ. ಚಿಕ್ಕಪ್ಪ ನಾಗಪ್ಪ ಮತ್ತು ಪ್ರಯಾಗಾಬಾಯಿಗೆ ಮಕ್ಕಳಿರಲಿಲ್ಲ. ಮಲ್ಲಿಕಾರ್ಜುನಪ್ಪ, ಅಡಿವೆಪ್ಪ, ನಾಗಪ್ಪನವರು ನಿಧನರಾದ ನಂತರ ಸಮಸ್ತ ಆಸ್ತಿ ಜವಾಬ್ದಾರಿಯನ್ನು ನಿಭಾಯಿಸುವ ಹೊಣೆ ಪ್ರಯಾಗಾ ಬಾಯಿವರ ಮೇಲೆ ಬಿತ್ತು. ಔಸಾದ ಜಮೀನುದಾರ ಉಟಗೆಯವರ ಪುತ್ರಿಯಾಗಿದ್ದ ಪ್ರಯಾಗಾಬಾಯಿಯು ಆಡಳಿತ ಹೊಣೆಗಾರಿಕೆ ಹೊರಲು ಯೋಗ್ಯಳೇ ಆಗಿದ್ದಳು. ತನ್ನ ಪತಿ ನಾಗಪ್ಪನ ಸೋದರ ಮಲ್ಲಿಕಾರ್ಜುನಪ್ಪನ ಮಗನಾಗಿದ್ದ ಚನ್ನಮಲ್ಲಪ್ಪನನ್ನು ಪ್ರಯಾಗಾಬಾಯಿಯು ದತ್ತಕ ತೆಗೆದುಕೊಂಡು ಬೆಳೆಸಿದರು. ಈ ಯುವಕ ಚನ್ನಮಲ್ಲಪ್ಪನಿಗೆ ಮಡಕಿ ಮನೆತನದ ಜಯದೇವಿಯನ್ನು ತೆಗೆದುಕೊಳ್ಳಲು ನಿಶ್ಚಯಿಸಿದರು. ಆದರೆ ವಿವಾಹ ನಿಶ್ಚಿತಾರ್ಥಕ್ಕೆ ಒಪ್ಪಿಗೆ ನೀಡಲು, ಎರಡು ವರುಷ ವಿಚಾರ-ವಿನಿಮಯ ನಡೆಯಿತು. ಆ ಕಾಲದಲ್ಲಿ ಲಿಂಗಾಯತರ ಒಳಪಂಗಡಗಳಲ್ಲಿ ಪರಸ್ಪರ ಕನ್ಯಾ ಕೊಡು-ತಕ್ಕೊಳ್ಳುವ ವ್ಯವಹಾರ ಇರಲಿಲ್ಲ. ವಾರದ ಮತ್ತು ಮಡಕಿ ಮನೆತನದವರು ಬಣಜಿಗ ಪಂಗಡದವರಾದರೆ, ಲಿಗಾಡೆ ಮನೆತನವು ಪಂಚಮಸಾಲಿ (ಪಂಚಾಚಾರ, ದೀಕ್ಷವಂತ) ಪಂಗಡದವರರಾಗಿದ್ದರು. ಎರಡು ವರುಷಗಳ ಸುದೀರ್ಘ ೭ಚರ್ಚೆಯ ನಂತರ ಎಲ್ಲರೂ ಒಪ್ಪಿದರು.

೧೯೨೬ನೇ ಇಸ್ವಿಯಲ್ಲಿ ೧೪ ವರ್ಷದ ಜಯದೇವಿಯವರ ವಿವಾಹವು ೧೬ ವರ್ಷದ ಚೆನ್ನಮಲ್ಲಪ್ಪ ಲಿಗಾಡೆ ಅವರೊಂದಿಗೆ ವೈಭವಪೂರ್ಣವಾಗಿ ಜರುಗಿತು.

೨. ಅತ್ತೆಮನೆಯ ಸೊಸೆ :

೧೪ ವರ್ಷದ ಮುಗ್ಧ ಹುಡುಗಿ ಲಗ್ನವಾಗಿ ಗಂಡನ ಮನೆಗೆ ಬಂದಳು. ವಿವಾಹದ ಸಂದರ್ಭದಲ್ಲಿ ಯಾವುದೋ ಒಂದು ಚಿಕ್ಕ ವಿಷಯಕ್ಕೆ ಅಸಮಾಧಾನ ತಲೆದೋರಿದ್ದರಿಂದ ಅತ್ತೆಯಂದಿರು ಮೊದಮೊದಲಿಗೆ ಸೊಸೆಯನ್ನು ನಿಷ್ಠುರವಾಗಿ

ನಡೆಸಿಕೊಂಡರು. ಒಟ್ಟು ಐದು ಜನ ಅತ್ತೆಯಂದಿರ ಕೈಯಲ್ಲಿ ಪಂಚಾಗ್ನಿಯ ಮಧ್ಯದ ತಪಸ್ಸಿನಂತೆ ಜಯದೇವಿತಾಯಿ ಒಪ್ಪವಾಗಿ ಸಂಸಾರ ನಡೆಸಿದರು. ಕಷ್ಟ ಅನುಭವಿಸಿದ ನಂತರ ಸುಖದ ದಿನ್ನಗಳು ಬಂದವು. ಲಿಗಾಡೆಯವರ ಮನೆಯಲ್ಲಿ ಚೆನ್ನಮಲ್ಲಪ್ಪನವರ ಸೋದರ ಜಯದೇವಪ್ಪನಿಗೆ ರತ್ನಾಬಾಯಿ ಎಂಬ ಶ್ರೀಮಂತ ಜಮೀನುದಾರರ ಮನೆತನದ ಕನ್ಯೆಯೊಂದಿಗೆ ವಿವಾಹ ಮಾಡಿದರು. ಈ ಚಿಕ್ಕ ಸೊಸೆ ತುಂಬಾ ಧೈರ್ಯಸ್ಥೆ, ಖಡಕ್, ನಿಷ್ಠುರ, ಹರಿತ ಮಾತಿನವಳು ಇದ್ದುದರಿಂದ ಐದು ಜನ ಅತ್ತೆಯಂದಿರು ಮೆತ್ತಗಾದರು. ಆಗ ಹಿರಿಸೊಸೆಯ ಸೌಮ್ಯ ಸ್ವಭಾವ, ಸಾತ್ವಿಕ ಗುಣ ಅರ್ಥವಾಗ ತೊಡಗಿ, ಐವರೂ ಜಯದೇವಿಯವರ ಮೇಲೆ ಪ್ರೀತಿ-ವಾತ್ಸಲ್ಯದ ಮಳೆಯನ್ನೇ ಸುರಿಸ ತೊಡಗಿದರು.

೮. ಕೌಟುಂಬಿಕ ಜೀವನ :

ಜಯದೇವಿತಾಯಿ ಹಾಗೂ ಚೆನ್ನಲಮಲ್ಲಪ್ಪ ದಂಪತಿಗಳಿಗೆ ಒಟ್ಟು ಆರು ಮಕ್ಕಳಾದರು. ಮಲ್ಲಿಕಾರ್ಜುನ, ಶಶಿಕಲಾ, ಶ್ರೀಕಂಠ, ಪ್ರಭುರಾಜ, ಬಸವರಾಜ ಮತ್ತು ಲಲಿತಾ. (ಜಯದೇವಿತಾಯಿಯವರು ಕೇವಲ ೨೦ ವರುಷ ದಾಂಪತ್ಯ ಜೀವನ ನಡೆಸಿದರು. ೧೯೪೬ ರಲ್ಲಿ ಪತಿ ಚೆನ್ನಮಲ್ಲಪ್ಪನವರು ಅನಾರೋಗ್ಯದಿಂದ ಲಿಂಗದೊಳಗಾದರು).

ಒಂದನೆಯದು ಗಂಡು ಮಗು. ಸಿದ್ಧರಾಮನ ಆರಾಧ್ಯದೈವ ಮಲ್ಲಿಕಾರ್ಜುನನ ಹೆಸರನ್ನೇ ಮಗುವಿಗೆ ಇಟ್ಟಿದ್ದರು. ಎರಡು-ಮೂರು ತಿಂಗಳಲ್ಲಿ ಮಗು ತೀರಿಕೊಂಡಿತು. ತಾಯಿಯವರು ತುಂಬಾ ದುಃಖಪಟ್ಟರು.

ಎರಡನೆಯದು ಹೆಣ್ಣು ಮಗು. ಶಶಿಕಲಾ ಎಂದು ನಾಮಕರಣ ಮಾಡಿದರು. ಈ ಮಗಳನ್ನು ಜಯದೇವಿತಾಯಿಯವರು ತಮ್ಮ ತವರು ಮನೆಗೆ ಅಂದರೆ ತಮ್ಮ ಸಹೋದರ ರಾಜಶೇಖರ ಮಡಕಿ ಅವರಿಗೆ ಕೊಟ್ಟು ಲಗ್ನ ಮಾಡಿದರು. ರಾಜಶೇಖರ ಮಡಕಿಯವರು ಹೆಸರಾಂತ ಸಮಾಜಸೇವಕರು, ಧಾರ್ಮಿಕ ಕಾರ್ಯಕರ್ತರು, ಹೋಮ ಗಾರ್ಡ್ಸ್ ಕಮಾಂಡೆಂಟ್ ಆಗಿ ಸೇವೆ ಸಲ್ಲಿಸಿದವರು, ಸೊಲ್ಲಾಪುರದ ಬಸವ ಸೆಂಟರ್‌ನ ಸ್ಥಾಪಕರು, ಯೋಗವಿಹಾರದ ಕಾರ್ಯಾಧ್ಯಕ್ಷರೂ ಆಗಿ ಸೇವೆಸಲ್ಲಿಸಿದ್ದಾರೆ. ಶಶಿಕಲಾ ತಾಯಿ ಮಡಕಿಯವರು ಇಂದು ಹೆಸರಾಂತ ಕನ್ನಡ-ಮರಾಠಿ ಸಾಹಿತ್ಯದ ಲೇಖಕಿ, ಕವಿಯಿತ್ರಿ, ಹಾಡುಗಾರ್ತಿಯೂ ಆಗಿದ್ದಾರೆ. ೨೯ ಗ್ರಂಥಗಳನ್ನು ರಚಿಸಿದ್ದಾರೆ. ಈ ದಂಪತಿಗಳಿಗೆ ರಾಜಕುಮಾರ, ಜಯವಿಭವ, ಸ್ವರೂಪಾ, ಬಸವಕುಮಾರ,

ಮಹೇಶ ಎಂದು ಐದು ಮಕ್ಕಳಿದ್ದಾರೆ. ರಾಜಕುಮಾರ ಮತ್ತು ಜಯವಿಭವ ಲಿಂಗೈಕ್ಯರಾಗಿದ್ದಾರೆ.

ಜಯದೇವಿತಾಯಿಯವರ ಐದನೇ ಮಗ ಬಸವರಾಜ, ಇವರು ಆಯುರ್ವೇದ ವೈದ್ಯರಾಗಿದ್ದು, ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಗಳಿದ್ದಾರೆ. ಇವರು ಮಾನವಸಂತಾನೋತ್ಪತ್ತಿಯ ಔಷಧಿ ಕಂಡು ಹಿಡಿದ ಖ್ಯಾತವೈದ್ಯರಗಿದ್ದಾರೆ. ದೇಶ-ವಿದೇಶಗಳಿಗೂ ಹೋಗಿ ಔಷಧಿ ನೀಡಿ ಬಂದಿದ್ದಾರೆ. ಡಾ॥ ಬಸವರಾಜ ಅವರಿಗೆ ಇಬ್ಬರು ಪತ್ನಿಯರಿದ್ದಾರೆ. ಬೆಂಗಳೂರಿನ ಮಧುಮಾಲಾ ಅವರೂ ವೈದ್ಯರಾಗಿದ್ದು, ಇವರಿಗೆ- ಶಶಾಂಕಾ, ಶರ್ವಾಣಿ, ಸ್ಮಿತಾ ಎಂಬ ಮಕ್ಕಳಿದ್ದಾರೆ. ದ್ವಿತೀಯ ಪತ್ನಿ ಶೈಲಜಾ (ಮಹಾದೇವಿ) ಇವರು ಸೊಲ್ಲಾಪುರದ ಬಿರಾಜದಾರ ಮನೆತನದವರು. ಇವರಿಗೆ- ಅನುಪಮಾ, ಶಿವರಾಜ, ಶಮಾ, ದೇವರಾಜ ಎಂಬ ಮಕ್ಕಳಿದ್ದಾರೆ. ಎಲ್ಲರೂ ವಿದ್ಯಾವಂತರು, ಸುಸಂಸ್ಕೃತರಿದ್ದಾರೆ.

ಜಯದೇವಿತಾಯಿಯವರ ಆರನೇ ಮಗು ಲಲಿತಾ. ಇವರನ್ನು ಬೈಲಹೊಂಗಲದ ಶ್ರೀ ಶಂಕರ ಮೂಗಿ ಅವರಿಗೆ ಕೊಟ್ಟು ಲಗ್ನ ಮಾಡಲಾಗಿತ್ತು. ಈ ದಂಪತಿಗಳಿಬ್ಬರೂ ಸಾಹಿತಿಗಳು, ಕವಿಗಳು, ಹೋಮಿಯೋಪತಿ ವೈದ್ಯರು ಆಗಿದ್ದರು. ಅನೇಕ ಗ್ರಂಥಗಳನ್ನು ರಚಿಸಿದ್ದರು. ೧೯೮೦ ರಿಂದ ಇವರು ಜಯದೇವಿತಾಯಿಯವ-ರೊಂದಿಗೆ ಬಸವಕಲ್ಯಾಣದ ಭಕ್ತಿಭವನದಲ್ಲಿದ್ದು, ಸೇವೆಗೈಯುತ್ತ ಇತ್ತೀಚೆಗೆ ಲಿಂಗೈಕ್ಯ ರಾದರು. ಈ ದಂಪತಿಗಳಿಗೆ ಚಾಮಲಾ, ವಿರಜಾ, ಸವಿತಾ, ಚೇತನಾ ಎಂದು ನಾಲ್ಕು ಜನ ಹೆಣ್ಣು ಮಕ್ಕಳಿದ್ದಾರೆ. ಇವರೆಲ್ಲ ಲಗ್ನವಾಗಿ ತಮ್ಮ ತಮ್ಮ ಗಂಡನ ಮನೆಯಲ್ಲಿದ್ದಾರೆ.

ಶರಣೆ ಜಯದೇವಿತಾಯಿಯವರ ಸಾತ್ವಿಕ ಸ್ವಭಾವ ಅವರ ಮಕ್ಕಳೆಲ್ಲರ ಮೇಲೂ ಆಗಿರುವುದನ್ನು ಕಾಣುತ್ತೇವೆ.

೯. ಜಯದೇವಿತಾಯಿ ಲಿಗಾಡೆ ಅವರ ಜೀವನ-ಸಾಧನೆ :

ಜಯದೇವಿತಾಯಿಯವರದು ಬಹುಮುಖ ಪ್ರತಿಭೆಯ ವ್ಯಕ್ತಿತ್ವ. ಆಗರ್ಭ ಶ್ರೀಮಂತ ವಾರದ ಮನೆತನದ ಮೊಮ್ಮಗಳಾಗಿ, ಶ್ರೀಮಂತ ಮಡಕಿ ಮನೆತನದ ಮಗಳಾಗಿ, ಶ್ರೀಮಂತ ಲಿಗಾಡೆ ಮನೆತನದ ಸೊಸೆಯಾಗಿ ಮೂರೂ ಮನೆತನಗಳ ಕೀರ್ತಿಯನ್ನು ನಾಡಿನಾದ್ಯಂತ ಬೆಳಗಿದರು. ಸಾಮಾಜಿಕ, ಧಾರ್ಮಿಕ, ಕೌಟುಂಬಿಕ, ಆಧ್ಯಾತ್ಮಿಕ ರಂಗಗಳಲ್ಲಿ ದುಡಿಯುತ್ತಲೇ ಕನ್ನಡ ನಾಡು-ನುಡಿಗಾಗಿ ಹೋರಾಟ ಮಾಡುತ್ತಲೇ ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕೃಷಿಗೈದರು.

ಬಾಲ್ಯದಲ್ಲಿ ಮರಾಠಿ ಶಾಲೆಯಲ್ಲಿ ಓದು-ಬರಹ ಕಲಿತಿದ್ದರೂ ಸಹ, ಎರಡು ಮಕ್ಕಳಾದ ನಂತರ ಮನೆಯಲ್ಲಿ ಕನ್ನಡ ಬರವಣಿಗೆ ವಚನಸಾಹಿತ್ಯದ, ಜನಪದ ಸಾಹಿತ್ಯದ ಓದುವಿಕೆ, ಬರೆಯುವಿಕೆ ಕಲಿತವರು, ಪ್ರತಿಭೆ-ಪ್ರಯತ್ನ-ದೈವೀಕಾರುಣ್ಯಗಳ ತ್ರಿವೇಣಿ ಸಂಗಮವಾಗಿದ್ದ ತಾಯಿಯವರು ಸಾಧಿಸಿದ ಸಾಧನೆಯು ಪಂಡಿತ-ಪಾಮರರೆಲ್ಲ ಬೆರಳು ಕಚ್ಚುವಂತಹದ್ದಾಗಿದೆ.

೧೦. ಸಮಾಜೋಧಾರ್ಮಿಕ ಸೇವೆ :

ಜಯದೇವಿತಾಯಿಯವರಿಗೆ ಬಾಲ್ಯದಲ್ಲಿಯೇ ಸಾಮಾಜಿಕ ಮತ್ತು ಧಾರ್ಮಿಕ ಜೀವನದ ಅನುಭವ, ವಾರದ ಮತ್ತು ಮಡಕಿ ಮನೆತನಗಳ ಪರಿಸರದಲ್ಲಿ ಉಂಟಾಗತೊಡಗಿತ್ತು. ಅಜ್ಜ ವಾರದ ಮಲ್ಲಪ್ಪನವರ ಮನೆಯಲ್ಲಿ ಕನ್ನಡ ಭಾಷೀಯ ಪ್ರೌಢಸ್ತ್ರೀಯರಿಗೆ ಶಿಕ್ಷಣ ಒದಗಿಸುವ ದೃಷ್ಟಿಯಿಂದ 'ವೀರಶೈವ ಮಹಿಳಾ ಜ್ಞಾನ ಮಂದಿರ' ಉಗಮವಾಗಿ ಕಾರ್ಯ ಪ್ರಾರಂಭಿಸಿತ್ತು. ವಾರದ ಮಲ್ಲಪ್ಪನವರ ಪತ್ನಿಯರಾದ ಬಸವ್ವತಾಯಿ, ಗೌರವ್ವಬಾಯಿಯವರು ಅಧ್ಯಕ್ಷೆಯರಾಗಿ, ಶ್ರೀಮತಿ ಸಂಗವ್ವ ಮಡಕಿ ಕಾರ್ಯದರ್ಶಿಯಾಗಿ ಕಾರ್ಯ ಪ್ರಾರಂಭವಾಗಿತ್ತು. ಜಯದೇವಿಯ ವರು ತಾಯಿಯ ಈ ಕಾರ್ಯಚಟುವಟಿಕೆಗಳೊಂದಿಗೆ ಬೆಳೆದು ಸಹಜವಾಗಿ ಸಮಾಜೋ-ಧಾರ್ಮಿಕ ಕಾರ್ಯಗಳಿಗೆ ತೊಡಗಿಸಿಕೊಂಡರು.

ಲಿಗಾಡೆ ಮನೆತನಕ್ಕೆ ಸೊಸೆಯಾಗಿ ಬಂದ ನಂತರ, ಪ್ರಾರಂಭದ ಮೂರು-ನಾಲ್ಕು ವರುಷ ಕಷ್ಟಗಳನ್ನು ಸಹಿಸಿಕೊಂಡು, ಅನಂತರ ಎಲ್ಲರ ಪ್ರೀತಿ-ವಿಶ್ವಾಸಗಳಿಸಿ ಸಮಾಜೋ-ಧಾರ್ಮಿಕ ರಂಗಕ್ಕೆ ಧುಮುಕಿದರು. ೧೯೨೭ ರಲ್ಲಿ ಮದುವೆಯಾಗಿ ೧೯೪೭ ವರೆಗೆ ಪ್ರಾಪಂಚಿಕ ಜೀವನ ನಡೆಸಿದರು. ೧೯೪೭ ರಲ್ಲಿ ಪತಿ ಚೆನ್ನಮಲ್ಲಪ್ಪ-ನವರು ಲಿಂಗೈಕ್ಯರಾದ್ದರಿಂದ ಎದೆಗುಂದಲಿಲ್ಲ. ಇಪ್ಪತ್ತು ವರುಷಗಳ ಸಾಂಸಾರಿಕ ಜೀವನದಲ್ಲಿ ಆರು ಮಕ್ಕಳ ತಾಯಿಯಾದರು. ಮೊದಲ ಮಗು ತೀರಿದರೂ ಧೃತಿಗೆಡಲಿಲ್ಲ. ಐದು ಜನ ಮಕ್ಕಳ ಲಾಲನೆ-ಪಾಲನೆ, ಅನಾರೋಗ್ಯಪೀಡಿತ ಪತಿಯ ಸೇವೆ, ಮುಪ್ಪಿನ ಅತ್ತೆಯಂದಿರ ಆರೈಕೆ, ದೊಡ್ಡ ಮನೆತನದ ಜವಾಬ್ದಾರಿ ನಿಭಾಯಿಸುತ್ತಲೇ ಸಾಮಾಜಿಕ-ಧಾರ್ಮಿಕ ರಂಗಗಳಲ್ಲಿ ಸೇವೆ ಸಲ್ಲಿಸಿದರು. ಚಿಕ್ಕ ಮಕ್ಕಳನ್ನು ಕಟ್ಟಿಕೊಂಡು ನಾಡನ್ನೆಲ್ಲ ಸಂಚರಿಸಿ ಸಮಾಜ ಸಂಘಟನೆಗೆ, ಸ್ತ್ರೀಶಿಕ್ಷಣ ಕುರಿತು ಜಾಗೃತಿ, ಅಕ್ಕನ ಬಳಗಗಳ ಸಂಘಟನೆಗೆ ಚಾಲನೆ ನೀಡಿದರು.

ಮರಾಠಿಯಂತೆ-ಕನ್ನಡದಲ್ಲಿ ಚೆನ್ನಾಗಿ ಮಾತನಾಡುವುದನ್ನು, ಬರೆಯುವು-

ದನ್ನು, ಸಾಹಿತ್ಯರಚನೆಯನ್ನು ಸಾಧಿಸಿದರು. ಬಸವಾದಿ ಶರಣರ ವಚನಗಳನ್ನು ಅಧ್ಯಯನ ಮಾಡಿದರು. ಶರಣರ ಸಂದೇಶ ತಿಳಿಸುತ್ತಾ ಸಮಾಜದಲ್ಲಿ ಅರಿವು ಮೂಡುವಂತೆ ಮಾಡತೊಡಗಿದರು. ಎಡದಕೈಯಲ್ಲಿ ಲಿಂಗಪೂಜೆ-ಬಲದಕೈಯಲ್ಲಿ ಜಂಗಮಸೇವೆ ಅಂದರೆ ಸಮಾಜ ಸೇವೆ ಅವರ ಉಸಿರಾಯಿತು. ೧೯೩೪ರಲ್ಲಿ ವೀರಶೈವ **ಸಾಹಿತ್ಯ ಸಭೆಯ ಅಧ್ಯಕ್ಷೆಯಾಗಿ** ಮಹಿಳೆಯರ ಜಾಗೃತಿಗಾಗಿ ಕರೆಕೊಟ್ಟರು.

ಕರ್ನಾಟಕ-ಮಹಾರಾಷ್ಟ್ರ-ಹೈದರಾಬಾದ (ಆಂಧ್ರ) ಪ್ರಾಂತಗಳಲ್ಲಿ ಅವಕಾಶ ದೊರೆತಾಗೆಲ್ಲ ಸಂಚರಿಸಿ ಭಾಷಣಗಳ ಮೂಲಕ ಕ್ರಿಯಾಶೀಲರಾಗಿ ಸಮಾಜ ಜಾಗೃತಿ ಯೊಂದಿಗೆ, ಲಿಂಗಾಯತ (ವೀರಶೈವ) ಧರ್ಮ ಜಾಗೃತಿಯನ್ನೂ ಕೈಕೊಂಡರು. ಬಾಲ್ಯದಿಂದಲೂ ಅಂದಿನ ಅನೇಕ ಪೂಜ್ಯರು ಸೊಲ್ಲಾಪುರಕ್ಕೆ ಬಂದಾಗ, ಅವರ ಅನುಭವ ಕೇಳುತ್ತಾ ಬೆಳೆದವರು ಈ ತಾಯಿ. ಅಥಣಿ ಶಿವಯೋಗಿಗಳು, ಬೀಳೂರಿನ ಶ್ರೀ ಗುರುಬಸವ ಸ್ವಾಮಿಗಳು, ಗುರುಮಠಕಲ್ಲ ಶ್ರೀಗಳು, ಹಾನಗಲ್ಲ ಶ್ರೀ ಕುಮಾರ ಸ್ವಾಮಿಗಳು, ಚಿತ್ರದುರ್ಗದ ಶ್ರೀಜಯದೇವ, ಜಯವಿಭವ, ಮಲ್ಲಿಕಾರ್ಜುನ ಜಗದ್ಗುರುಗಳವರು, ನಾಲತ್ವಾಡದ ಶ್ರೀ ವೀರೇಶ್ವರ ಶರಣರು, ಶ್ರೀ ಫ. ಗು. ಹಳಕಟ್ಟಿ ಶರಣರು, ಶ್ರೀ ಹರ್ಡೇಕರ ಮಂಜಪ್ಪ ಶರಣರು, ಶ್ರೀ ಉತ್ತಂಗಿ ಚನ್ನಪ್ಪನವರು ಮುಂತಾದ ಹಿರಿಯರ ಸಾನಿಧ್ಯ, ಸಂಪರ್ಕ ತಾಯಿಯವರ ಸಮಾಜೋ-ಧಾರ್ಮಿಕ ಸೇವೆಗೆ ತಳಹದಿ ಒದಗಿಸಿದ್ದವು.

೧೧. ಹೈದರಾಬಾದ ನಿಜಾಮನ ಫರಮಾನ್ ಉಲ್ಲಂಘಿಸಿದ್ದು :

೧೯೪೬ ರಲ್ಲಿ ಹೈದರಾಬಾದ ಪ್ರಾಂತದ ಜಹಿರಾಬಾದಿನಲ್ಲಿ ಹೈದರಾಬಾದ ಪ್ರಾಂತಿಕ ಸಭೆ, ಅಲ್ಲಿ ತಾಯಿಯವರ ಭಾಷಣ ಏರ್ಪಾಟಾಗಿತ್ತು. ತಾಯಿಯವರ ಭಾಷಣವೆಂದರೆ ಆ ಕಾಲದಲ್ಲಿ ಜನ ಸಾಗರೋಪಾದಿಯಲ್ಲಿ ನೆರೆಯುತ್ತಿದ್ದರು. ಆಡಳಿತ ಭಾಷೆ ಉರ್ದು ಇದ್ದರೂ, ಜನರ ಮನೆ ಮಾತು ಕನ್ನಡವೇ ಇತ್ತು. ತಾಯಿಯವರು ಧಾರ್ಮಿಕವಾಗಿ ಶರಣರ ಧರ್ಮ-ಸಾಹಿತ್ಯ ಕುರಿತು ಭಾಷಣ ನೀಡುತ್ತಲೇ ಜನಜಾಗೃತಿ, ಮಹಿಳಾ ಜಾಗೃತಿ ಮಾಡುತ್ತಿದ್ದರು. ಇದರಿಂದ ಭಯಭೀತನಾಗಿದ್ದ ನಿಜಾಮನು ಫರಮಾನ್ (ಆಜ್ಞೆ) ಹೊರಡಿಸಿ, ತನ್ನ ರಾಜ್ಯದ ಗಡಿಯೊಳಗೆ ಬಂದರೆ ಬಂಧಿಸಲು ತಿಳಿಸಿದ್ದನು. ತಾಯಿಯವರು ಈ ಫರಮಾನ್ ಉಲ್ಲಂಘಿಸಿ, ಭಾಷಣ ಮಾಡಿದರು, ಜನಸಾಗರದ ಬೆಂಬಲದ ಮುಂದೆ ಅಧಿಕಾರಿಗಳ ಆಟ ನಡೆಯಲಿಲ್ಲ. ಈ ಘಟನೆಯ ಬಗ್ಗೆ ತ್ರಿಪದಿಯಲ್ಲಿ ಬರೆದಿರುವರು-

ಕಲ್ಯಾಣದ ಭೂಮಿಯ ಸೀಮೆಯೊಳಗೆ ನಾ
ಕಾಲಿಡಕೂಡದು ಕಾಯ್ದೆ ತೆಗೆದಾನ- ನಿಜಾಮ
ಆಲಿಸದೆ ಸೀಮೆಯ ದಾಟಿದೆ

ಜಹಿರಾಬಾದಿನಲ್ಲಿ ಶ್ರೀ ಅಡಿವೆಪ್ಪ ಚಂದ್ರೆ ಹಾಲಪ್ಪ ಚಿಂಚೋಳಿ ಮುಂತಾದವರೊಂದಿಗೆ ಚಿಂತನ ಮಾಡಿದರು.

೧೨. ಸ್ತ್ರೀ ಶಿಕ್ಷಣ-ಸ್ತ್ರೀಯರ ಜಾಗೃತಿ :

ಜಯದೇವಿತಾಯಿಯವರು ಸ್ತ್ರೀ ಶಿಕ್ಷಣ-ಸ್ತ್ರೀಯರ ಜಾಗೃತಿಗಾಗಿ ೧೯೩೪ ರಲ್ಲಿ ಶರಣ ಹರ್ಡೇಕರ ಮಂಜಪ್ಪನವರು ಪ್ರಾರಂಭಿಸಿದ್ದ 'ಅಕ್ಕಮಹಾದೇವಿ ಜಯಂತಿ' ಹಾಗೂ ಅಕ್ಕನ ಬಳಗಗಳ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಭಾಷಣ ನೀಡತೊಡಗಿದರು. ಮಹಿಳೆಯರಲ್ಲಿ ಶಿಕ್ಷಣ ಪ್ರಜ್ಞೆ ಬೆಳೆಯಬೇಕು, ಸ್ತ್ರೀಯರು ಸುಶಿಕ್ಷಿತರಾಗಬೇಕು. ಬಸವಾದಿ ಶರಣರ ವಚನಗಳ ಮೂಲಕ ಹಾಗೂ ತಾವೇ ರಚಿಸಿದ ತ್ರಿಪದಿಗಳನ್ನು ಹಾಡುವ ಮೂಲಕ ಪ್ರಜ್ಞೆ ನೀಡುತ್ತಿದ್ದರು.

ಹೆಣ್ಣಿನ ಕಳವಳ ಕೇಳಿ ತಾ ಕರಗ್ಯಾನ
ಅಣ್ಣ ಮಾಡ್ಯಾನ ಪಾವನ। ಹೆಣ್ಣೀನ
ಪುಣ್ಯ ಕಟುಕೊಂಡ ಬಸವಣ್ಣ॥

ಹೆಣ್ಣು ಜೀವಕ ಅಕ್ಕ ಹೊಸಗಣ್ಣ ನೀ ಕೊಟ್ಟಿ
ಎಣ್ಯಾಗಿ, ಬತ್ಯಾಗಿ ದೀಪಾಗಿ। ದೀಪ್ತಿಯಾಗಿ
ಅಣಿ ಮಾಡಿ ಕೊಟ್ಟೇನಿ ಕಿಡಿನುಡಿ॥

ದೇವರು - ಧರ್ಮ - ಆಚರಣೆಗಳ ಕುರಿತಾಗಿ ಜನಮಾನಸದಲ್ಲಿದ್ದ ಅಜ್ಞಾನ-ಮೂಢನಂಬಿಕೆಗಳನ್ನು ತೊಡೆದು ಹಾಕಲು ತಾಯಿಯವರು ವಿಶೇಷವಾಗಿ ಪ್ರಯತ್ನಿಸಿದರು -

ದೇವರ ಕರಿಸುವುದು, ಮತ್ತವನ ಕಳಿಸುವುದು
ಇವ ಏನ ನಿಮ್ಮ ಪಗಡಿ ಆಟ। ದೊಡ್ಡಮ್ಮ
ದೇವ ತುಂಬ್ಯಾನ ಜಗದೊಳಗ॥

ಕಲ್ಲೋಳು ದೇವರಿಲ್ಲ, ಕಟ್ಟಿಗ್ಯಾಗ ಸಿಕ್ಕಿಲ್ಲ
ಹುಲ್ಲ ಜನರೆಲ್ಲ ಅರಿತಿಲ್ಲ। ಪರವಸ್ತು
ಬಲ್ಲ ಮಹಿಮರ ಬಲ್ಲೆ ಇರುವ॥

ಎಂದು ಸಮಾಜಕ್ಕೆ, ವಿಶೇಷವಾಗಿ ಸ್ತ್ರೀಯರಿಗೆ ತಿಳಿವಳಿಕೆ ನೀಡುತ್ತಿದ್ದರು. ಪೂಜಾರಿ-ಪುರೋಹಿತರ ಕಪೋಲ ಕಲ್ಪಿತ ಕಥೆಗಳನ್ನು, ವಿಡಂಬಿಸಿ ಜನತೆಗೆ ತಿಳಿಸುತ್ತಿದ್ದರು -

ಕಲ್ಲಿನ ಗುಡಿಗಟ್ಟಿ ಚಲುವಾದ ಮೂರುತಿ
ಕುಲಕೊಂದು ದೇವರ ಹೆಸರಿಟ್ಟು। ರೂಪಿಟ್ಟು
ಜಾಲದ ಸರಪಳಿ ಚಾಚ್ಯಾರ ॥

ಇಂತಹ ಪೂಜಾರಿ-ಪುರೋಹಿತರ ಶೋಷಣೆಯ ಜಾಲದ ಸರಪಳಿ ಹರಿದೊಗೆದು ಸಮಾಜ ಎಚ್ಚರಾಗಬೇಕೆಂದು ನಿಷ್ಠುರವಾಗಿ ಹೇಳುತ್ತಿದ್ದರು.

ಜಯದೇವಿ ತಾಯಿಯವರು ಅಕ್ಕನಬಳಗ, ವೃದ್ಧಾಶ್ರಮಗಳಲ್ಲಿಯೂ ವಚನ ಗಾಯನ ಸ್ಪರ್ಧೆ, ವಚನಕಂಠಪಾಠ ಸ್ಪರ್ಧೆಗಳನ್ನು ನಡೆಸಿ, ಬಹುಮಾನ ನೀಡುತ್ತಿದ್ದರು. ಅಲ್ಲಲ್ಲಿ ಕನ್ನಡ ಶಾಲೆಗಳನ್ನು ಪ್ರಾರಂಭಿಸಿ, ಶಿಕ್ಷಕರನ್ನು ನೇಮಿಸಿ, ಅವರಿಗೆ ಆರ್ಥಿಕ ಸಹ-ಕಾರ ನೀಡುತ್ತಿದ್ದರು. ಸೊಲ್ಲಾಪುರದಲ್ಲಿ ಕನ್ನಡ ಕನ್ಯಾ ಶಾಲೆ, ಧಾರವಾಡದಲ್ಲಿ ಜಯದೇವಿ ತಾಯಿಯ ಕನ್ಯಾ ಮಾಧ್ಯಮಿಕ ಶಾಲೆ, ಹುಬ್ಬಳ್ಳಿಯಲ್ಲಿ ಭಾರತೀ ಹಾಯಸ್ಕೂಲ ಸ್ಥಾಪಿಸಿ ಸ್ತ್ರೀಯರ ಶಿಕ್ಷಣಕ್ಕಾಗಿ ಶ್ರಮಿಸಿದರು. (ಧಾರವಾಡದ ಜಯದೇವಿ ಹಾಯಸ್ಕೂಲಿನಲ್ಲಿ ನಾನು ಒಂಭತ್ತನೇ ಕ್ಲಾಸು ಕಲಿಯುವ ಭಾಗ್ಯ ಪಡೆದಿರುವದು ಯೋಗಾ-ಯೋಗವೆನ್ನ-ಬಹುದು, ಅದು ನನ್ನ ಭಾಗ್ಯವೇ ಎಂದು ಭಾವಿಸಿದ್ದೇನೆ.)

೧೯೫೦ ರಲ್ಲಿ ಆಂಧ್ರದ ಸದಾಶಿವಪೇಟದಲ್ಲಿ ಜರುಗಿದ ಬಸವಜಯಂತಿ ಕಾರ್ಯಕ್ರಮಕ್ಕೆ ಹೋಗಿ, ಬಸವಶರಣರು-ಶರಣೆಯರ ಸಮಾನತೆ ಬಗ್ಗೆ ಭಾಷಣ ಮಾಡಿ ಬಂದರು. ೧೯೫೧ ರಲ್ಲಿ ಉದಗೀರಕ್ಕೆ ಅಕ್ಕನ ಹುಣ್ಣಿಮೆ ಕಾರ್ಯಕ್ರಮಕ್ಕೆ ಹೋಗಿ ಮೂರು ದಿನ ಇದ್ದು, ಅಧ್ಯಕ್ಷತೆ ವಹಿಸಿ ಸ್ತ್ರೀ ಜಾಗೃತಿ ಮಾಡಿ ಬಂದರು. ಈ ಕಾಲಕ್ಕೆ ಪ್ರಭುರಾವ ಕಂಬಳಿಬಾಬಾ ಅವರ ಪರಿಚಯ, ಸಮಾಜ-ಧರ್ಮ ಕಾರ್ಯಕ್ರಮ-ಗಳಿಗಾಗಿ ಅವರು ಸಹಕಾರ ನೀಡಿದರು.

೧೯೫೭ ಆಗಸ್ಟ ೧೭ ರಂದು ರಾಷ್ಟ್ರಸೇವಾಕಾಲದ ಪ್ರೌಢಸ್ತ್ರೀಯರ ಶಾಖೆ-ಯನ್ನು ತಮ್ಮ 'ಜಯನಿಕೇತನ' ಮನೆಯಲ್ಲಿ ಸ್ಥಾಪನೆಯಾಗಲು ಬೆಂಬಲಿಸಿದರು.

೧೯೫೮ ರಲ್ಲಿ ಹೈದರಾಬಾದ ಲಿಂಗಾಯತ ಪರಿಷತ್ತಿನ ಹಿತ ಚಿಂತಕರಾಗಿ, ಮಹಿಳಾ ಸಮಿತಿಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು.

೧೩. ರಜಾಕಾರರ ಹಾವಳಿ - ನಿರಾಶ್ರಿತರಿಗೆ ಆಶ್ರಯ :

೧೯೪೭ ಆಗಸ್ಟ ೧೫ರಂದು ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಆದರೆ ಹೈದರಾಬಾದ ಪ್ರಾಂತದಲ್ಲಿ ಮುಸ್ಲಿಂ ಸೈನಿಕರು ಅಂದರೆ ಉಗ್ರವಾದಿ ರಜಾಕಾರರು ಹಿಂದೂ ಜನತೆಯ ಮೇಲೆ ಆಕ್ರಮಣ ನಡೆಸತೊಡಗಿದರು. ನಿಜಾಮ ಆಡಳಿತದ ಈ ಅವಧಿಯಲ್ಲಿ ಕೊಲೆ, ಸುಲಿಗೆ, ಅತ್ಯಾಚಾರ, ಘೋರ ಸ್ವರೂಪ ತಾಳಿತು. ಸಹಸ್ರಾರು ಜನ ಮನೆ ಮಾರು ತೊರೆದು ಸೊಲ್ಲಾಪುರ ಭಾಗಕ್ಕೆ ನಿರಾಶ್ರಿತರಾಗಿ ಧಾವಿಸಿದರು. ಭಾಲ್ಕಿಯ ಚೆನ್ನಬಸವ ಪಟ್ಟದೇವರು ಹೈದರಾಬಾದ ಪ್ರಾಂತದಲ್ಲಿದ್ದ ತಮ್ಮ ಮಠಗಳ ಕನ್ನಡ ಶಾಲೆಗಳಲ್ಲಿ ಕಲಿಯುತ್ತಿದ್ದ ನೂರಾರು ವಿದ್ಯಾರ್ಥಿಗಳನ್ನು ಕಟ್ಟಿಕೊಂಡು ಬಂದರು. ಈ ಪ್ರಸಂಗದಲ್ಲಿ ನನ್ನ ತಂದೆ ಶ್ರೀ ಹಾವಪ್ಪಕೋಟೆ ಅವರು ವಿದ್ಯಾರ್ಥಿಯಾಗಿದ್ದರು. ಅವರು ಸ್ವತಃ ಅನುಭವಿಸಿದ ಈ ಘಟನೆಯನ್ನು ನಮ್ಮ ಮುಂದೆ ಹೇಳುತ್ತಿದ್ದರು.

ಆ ಸಂದರ್ಭವನ್ನು ನೆನೆದು ಅಂದು ಅನುಭವಿಸಿದ ಕವಿ ಚಂಡರಕಿಯವರು-

ಅಟ್ಟಿ ಓಡಿಸಿದ ಕಾಸೀಮ ರಜವಿ
ಕಟ್ಟಿಕೊಂಡು ರಜಾಕಾರ ದಂಡು
ಓಡಿಬಂದೆವು ನಾವಂದು
ತೋಳ ಕಂಡ ಕುರಿಯ ಹಿಂಡು.

ಈ ರೀತಿ ಬಂದ ಸಹಸ್ರಾರು ಜನರಿಗೆ ಸೊಲ್ಲಾಪುರದಲ್ಲಿ ಜಯದೇವಿತಾಯಿ ಮಾತೃವಾತ್ಸಲ್ಯದಿಂದ ಆಶ್ರಯದಾತೆಯಾದರು. ತಮ್ಮ ಮನೆಗಳಲ್ಲಿ, ವಾಡೆಯಲ್ಲಿ, ತೋಟದಲ್ಲಿ ಶೆಡ್ಡುಗಳನ್ನು ನಿರ್ಮಿಸಿ ಆರು ತಿಂಗಳ ಕಾಲ ಅನ್ನ-ವಸ್ತ್ರ-ಔಷಧವನ್ನಿತ್ತು ರಕ್ಷಿಸಿದರು. ಸಾವಿರಾರು ಛಾದರಗಳನ್ನು ಹೊದ್ದುಕೊಳ್ಳಲು ನೀಡಿದರು. ಗರ್ಭಿಣಿ ಸ್ತ್ರೀಯರಿಗೆ ಬಾಣಂತನ ಮಾಡಿದರು, ಮಕ್ಕಳು, ವಿದ್ಯಾರ್ಥಿಗಳ ಆರೈಕೆ ಮಾಡಿದರು. ಮುಂದೆ ಸರದಾರ ವಲ್ಲಭಭಾಯಿ ಪಟೇಲರು ದಿಟ್ಟ ನಿಲುಮೆ ತಾಳಿ 'ಪೋಲೀಸ್ ಆ್ಯಕ್ಶನ್' ಮೂಲಕ ನಿಜಾಮ ಪ್ರಾಂತವನ್ನು ಗೆದ್ದು ಭಾರತದ ಒಕ್ಕೂಟದಲ್ಲಿ ಸೇರಿಸಿದರು. ಜನ ಜಯಭೇರಿ ಕೇಳಿ ಕುಣಿದಾಡಿದರು. ತಾಯಿಯವರ ಋಣ ತೀರಿಸುವುದೆಂತು? ಸಾಧ್ಯವೆ? ಕವಿ ಹೇಳುತ್ತಾನೆ-

ಹೇಗೆ ತೀರಿಸಬೇಕು ತಾಯಿ
ನಿನ್ನ ಋಣವ ಒಟ್ಟು
ನೆನೆವೆವು ಹಡೆದ ಮಕ್ಕಳಿಗೆ
ನಿನ್ನ ಹೆಸರು ಇಟ್ಟು.

ಈ ರೀತಿ ಕಷ್ಟದ ಪ್ರಸಂಗದಲ್ಲಿ ಸಮಾಜ ಬಾಂಧವರನ್ನು, ನಾಡ ಮಕ್ಕಳನ್ನು ರಕ್ಷಿಸಿ, ಪೋಷಿಸಿದ ತಾಯಿಯ ಹೃದಯವೈಶಾಲ್ಯ, ತಾಯಿಕರುಳು ನಮಗೆ ಅರ್ಥ-ವಾಗುತ್ತದೆ.

೧೪. ಕಾರ್ಮಿಕ ಸಾಕ್ಷರ ಮಂಡಳಿಗೆ ಸದಸ್ಯೆಯಾಗಿ ಸೇವೆ :

೧೯೫೧ ನವೆಂಬರ ೨೩ ರಂದು ತಾಯಿಯವರು ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡಿದರು. ಕಾರ್ಮಿಕ ಸಾಕ್ಷರ ಮಂಡಳಿಗೆ ಸದಸ್ಯರಾಗಿ ತಾಯಿಯವರು ಸಲ್ಲಿಸಿದ ಸೇವೆ ಅಮೋಘವಾದುದು. ಸೊಲ್ಲಾಪುರವು ಅಂದು ಉದ್ದಿಮೆ, ವ್ಯಾಪಾರಗಳ ಮಹತ್ವದ ಪಟ್ಟಣವಾಗಿತ್ತು. ದಕ್ಷಿಣ ಭಾರತದಲ್ಲಿಯೇ ಹೆಸರುಗಳಿಸಿತ್ತು. 30 ಸಾವಿರ ಮೇಲ್ಪಟ್ಟು ಕಾರ್ಮಿಕರು, ಕನ್ನಡಿಗರೇ ಹೆಚ್ಚಾಗಿದ್ದರು. ತಾಯಿಯವರು ಕಾರ್ಮಿಕರಿ-ಗಾಗಿ, ಅವರ ಮಕ್ಕಳಿಗಾಗಿ ಕನ್ನಡಶಾಲೆ ತೆರೆಯಲು ವ್ಯವಸ್ಥೆ ಮಾಡಿದರು. ಎರಡು ವರುಷಗಳಲ್ಲಿ ಇಪ್ಪತ್ತೈದು ವರ್ಗಗಳನ್ನು ತೆರೆಯುವಂತೆ ಕಾರ್ಮಿಕ ಸಂಘವು ಕೇಳು-ವಂತಾಯಿತು. ತಾಯಿಯವರು ಕಾರ್ಮಿಕರ ಬಾಳಿಗೆ ಸಾಕ್ಷರತೆಯ ಬೆಳಕನ್ನು ನೀಡು-ವಲ್ಲಿ ಶ್ರಮಿಸಿದರು.

೧೫. ದೀನ-ದಲಿತ-ಅಸ್ಪೃಶ್ಯರ ಸೇವೆ :

ಜಯದೇವಿ ತಾಯಿಯವರು ದೀನ-ದಲಿತ-ಶೋಷಿತ-ಅಸ್ಪೃಶ್ಯರ ಸಲುವಾಗಿ, ಅವರ ಉದ್ಧಾರದ ಸಲುವಾಗಿಯೂ ಶ್ರಮಿಸಿದರು. ಬಸವಾದಿ ಶರಣರು ಆಚರಿಸಿ ತೋರಿದ ಸಮಾಜೋ-ಧಾರ್ಮಿಕ ಹಿನ್ನೆಲೆ ತಾಯಿಯವರಿಗಿತ್ತು. ಇನ್ನಿತರ ಸಮಾಜದವರಿಗಿಲ್ಲದ ಸಾಮಾಜಿಕ-ಧಾರ್ಮಿಕ ತಳಹದಿ ಲಿಂಗಾಯತ ಸಮಾಜದ ಸ್ತ್ರೀಯರಿಗಿದೆ ಎಂಬುದನ್ನು ಒತ್ತು ಕೊಟ್ಟು ಹೇಳುತ್ತಿದ್ದರು. ಸೊಲ್ಲಾಪುರ, ಬಾರ್ಶಿಗಳಲ್ಲಿದ್ದ ಹರಿಜನ ಕೇರಿಗಳಿಗೆ, ಹರಿಜನ ಬೋರ್ಡಿಂಗಗಳಿಗೆ ಹೋಗಿ ಸಹಾಯ-ಸಹಕಾರ ನೀಡುತ್ತಿದ್ದರು. ಅವರಲ್ಲಿ ಸಾಕ್ಷರತೆ, ಸ್ವಾವಲಂಬನೆ, ಸ್ವಾಭಿಮಾನ ಮೂಡಿ- ಬರುವಂತೆ ತಿಳುವಳಿಕೆ ನೀಡುತ್ತಿದ್ದರು. ಅವರು ಶಿಸ್ತು, ಸ್ವಚ್ಛತೆ, ಶಿಕ್ಷಣದಿಂದ ಎಲ್ಲರಂತೆ ಸಮಾನರಾಗಿ ಬದುಕಬೇಕೆಂದು ಪರಿಶ್ರಮಿಸುತ್ತಿದ್ದರು. ಭಾಲ್ಕಿ ಹಿರೇಮಠದ ಪೂಜ್ಯ ಚೆನ್ನಬಸವ ಪಟ್ಟದೇವರು, ಇಳಕಲ್ಲ-ಚಿತ್ತರಗಿ ಸಂಸ್ಥಾನಮಠದ ಪೂಜ್ಯ ಮಹಾಂತ ಸ್ವಾಮಿಗಳವರ ದಲಿತೋದ್ಧಾರ, ಅಸ್ಪೃಶ್ಯೋದ್ಧಾರದ ಕಳಕಳಿಯನ್ನು ತಾಯಿಯವರು ಕಲ್ಯಾಣಕ್ಕೆ ಬಂದ ನಂತರ ಮೆಚ್ಚಿಕೊಂಡು ಹರ್ಷ ವ್ಯಕ್ತಪಡಿಸುತ್ತಿದ್ದರು. ಬೆಲ್ದಾಳ ಸಿದ್ಧರಾಮ ಶರಣರನ್ನು (ಹರಿಜನ ಬಾಲಕ ವಿಠ್ಠಲನು ಶರಣನಾದುದನ್ನು ಕಂಡು) ಗೌರವಿಸುತ್ತಿದ್ದರು.

೧೬. ಡಾ॥ ಎಂ. ಸಿ. ಮೋದಿಯವರ ನೇತ್ರದಾನ ಶಿಬಿರದಲ್ಲಿ ಸೇವೆ :

ಅಂತರ‍್ರಾಷ್ಟ್ರೀಯ ಖ್ಯಾತಿಯ ನೇತ್ರತಜ್ಞ ಡಾ॥ ಎಂ. ಸಿ. ಮೋದಿ ಅವರು ಸಂಘಟಿಸುತ್ತಿದ್ದ ನೇತ್ರದಾನ ಶಿಬಿರದಲ್ಲಿ ಜಯದೇವಿ ತಾಯಿಯವರು ಹಾಜರಿದ್ದು, ರೋಗಿಗಳಿಗೆ ಪ್ರಸಾದ ವ್ಯವಸ್ಥೆ ನೋಡಿಕೊಂಡು, ಬಡ-ಬಗ್ಗರ ಸೇವೆಯಲ್ಲಿ ಉದಾರವಾಗಿ ಸೇವೆ ಸಲ್ಲಿಸುತ್ತಿದ್ದರು.

೧೭. ೭೭೦ ಅಮರ ಗಣಂಗಳ ಸ್ಮಾರಕ ಮಹೋತ್ಸವದಲ್ಲಿ ಸೇವೆ : ಹಳಕಟ್ಟಿ ಶರಣರಿಂದ ಮೆಚ್ಚಿಗೆ :

೧೯೫೪ ರಲ್ಲಿ ಬಂಥನಾಳದ ಪೂಜ್ಯ ಶ್ರೀ ಸಂಗನಬಸವ ಶಿವಯೋಗಿಗಳು ವಿಜಾಪುರದಲ್ಲಿ ಹಮ್ಮಿಕೊಂಡಿದ್ದ ೭೭೦ ಅಮರಗಣಾಧೀಶ್ವರರ ಪೂಜಾ ಮಹೋತ್ಸವದ ಅಂಗವಾಗಿ ನಡೆದ ಮಹಿಳಾ ಪರಿಷತ್ತಿನಲ್ಲಿ ಉದ್ಘಾಟಕರಾಗಿ ತಾಯಿಯವರು ಭಾಷಣ ಮಾಡಿದರು. ಹನ್ನೆರಡನೆಯ ಶತಮಾನದ ಶಿವಶರಣೆಯರ ಜೀವನ-ಸಂದೇಶ-ಆದರ್ಶಗಳನ್ನು ಇಂದಿನ ಮಹಿಳೆಯರೂ ಸಹ ಅರಿತು-ಜೀವನದ ಎಲ್ಲ ರಂಗಗಳಲ್ಲಿ ಮೇಲೆ ಬರಬೇಕೆಂದು ಹೇಳಿದರು. ವಚನಪಿತಾಮಹ ಶರಣ ಫ. ಗು. ಹಳಕಟ್ಟಿಯವರು ತಾಯಿಯವರನ್ನು ಗೌರವ ಪೂರ್ವಕವಾಗಿ ಮಾತನಾಡಿಸಿ, ೭೭೦ ಅಮರಗಣಂಗಳು ಗ್ರಂಥವನ್ನು ನೀಡಿದರು. ಶರಣರ ದರ್ಶನ ಪಡೆದು ತಾಯಿಯವರು ಧನ್ಯತೆಯನ್ನು ಅನುಭವಿಸಿದರು.

೧೮. ರೆ॥ ಉತ್ತಂಗಿ ಚೆನ್ನಪ್ಪನವರಿಂದ ಸಿದ್ಧರಾಮ ಸಾಹಿತ್ಯ-ಪ್ರಕಟನೆ :

"ಸೊಲ್ಲಾಪುರದ ಸಿದ್ಧರಾಮನು ಲಿಂಗಧಾರಿಯಾಗಿಲ್ಲ, ಕೊನೆಗೂ ಭವಿಯಾಗಿಯೇ ಉಳಿದನು'' ಎಂಬ ಒಂದು ಹೇಳಿಕೆಯು ಡಿ. ಎಲ್. ನರಸಿಂಹಾಚಾರ್ ಅವರಿಂದ ಪತ್ರಿಕೆಯಲ್ಲಿ ಬಂದಾಗ, ಶ್ರೀ ಉತ್ತಂಗಿ ಚೆನ್ನಪ್ಪನವರು "ಸಿದ್ಧರಾಮನು ಲಿಂಗಧಾರಿಯಾಗಿದ್ದನು'' ಎಂದು ಆಧಾರಸಹಿತವಾಗಿ ಉತ್ತರಿಸಿದರು. ಇದನ್ನು ಬೆಳಗಾವಿಯಲ್ಲಿ ಲಿಂಗರಾಜ ಕಾಲೇಜಿನಲ್ಲಿ ಓದುತ್ತಿದ್ದ ರಾಜಶೇಖರ ಮಡಕಿಯವರು ಓದಿ, ಧಾರವಾಡಕ್ಕೆ ಬಂದು ಮಿಶನ್‌ಕಾಂಪೌಂಡ್‌ನಲ್ಲಿದ್ದ ರೆ॥ ಉತ್ತಂಗಿ ಚೆನ್ನಪ್ಪನವರನ್ನು ಕರೆದುಕೊಂಡು ಸೊಲ್ಲಾಪುರಕ್ಕೆ ಬಂದು, ತಾಯಿಯವರ ಭೆಟ್ಟಿ ಮಾಡಿಸಿದರು. ತಾಯಿಯವರು ತಮ್ಮ ಕನ್ನಡಕೋಟೆ ಪ್ರಕಾಶನದಿಂದ ಶ್ರೀ ಉತ್ತಂಗಿಯವರು ಸಂಪಾದಿಸಿದ 'ಸಿದ್ಧರಾಮ ಸಾಹಿತ್ಯ ಸಂಗ್ರಹ' ಗ್ರಂಥ ಪ್ರಕಟಿಸಿದರು. ಶ್ರೀ ಡಿ. ಎಲ್. ನರಸಿಂಹಾಚಾರ್

ಅವರು ತಮ್ಮ ಹೇಳಿಕೆ ಹಿಂದಕ್ಕೆ ಪಡೆದು, ಕ್ಷಮೆ ಕೇಳಿದರಂತೆ. (ಶ್ರೀ ರಾಜಶೇಖರ ಮಡಕಿ ಅವರು ಈ ಪ್ರಸಂಗವನ್ನು ಸ್ಮರಿಸಿಕೊಂಡು ಹೇಳುತ್ತಾರೆ).

೧೯. ಬಸವಕಲ್ಯಾಣದಲ್ಲಿ ಮಹಿಳಾಪರಿಷತ್ತಿನ ಉದ್ಘಾಟನೆ :

ಜಯದೇವಿತಾಯಿಯವರು ದಿನಾಂಕ ೩೦-೧-೧೯೫೫ ರಂದು ಬಸವ-ಕಲ್ಯಾಣದಲ್ಲಿ ಜರುಗಿದ ಅಖಿಲಭಾರತ ವೀರಶೈವ ಮಹಿಳಾ ಪರಿಷತ್ತಿನ ಉದ್ಘಾಟಕರಾಗಿ ಕಳಕಳಿಯಿಂದ ಭಾಷಣ ಮಾಡಿದರು. ಬಂಥನಾಳ ಶಿವಯೋಗಿಗಳು ಮಹಾಸಭೆಯ ಅಧ್ಯಕ್ಷರಾಗಿದ್ದರು, ಮೈಸೂರಿನ ಶ್ರೀಮಾನ್ ಜಯಚಾಮರಾಜೇಂದ್ರ ಒಡೆಯರರು ಉಪಸ್ಥಿತರಿದ್ದರು. ತಾಯಿಯವರು ಹೃದಯತುಂಬಿ ಮಾತನಾಡಿದರು -"ಬಸವಾದಿ ಶರಣರು ತುಳಿದ ಈ ಪಾವನ ಭೂಮಿಯ ಧೂಳಿ ಲೇಪನದಿಂದ ಜನ್ಮ ಪಾವನವಾಗಲಿ, ಭಗವಾನ್ ಬಸವದೇವನ ಮಹಾಮನೆಯಲ್ಲಿ ನಾವಿಂದು ನಿಂತಿದ್ದೇವೆ. ವಿಶ್ವಕಲ್ಯಾಣವನ್ನು ಸಾಧಿಸಲು ಹೊರಟ ಬಸವಕಲ್ಯಾಣವಿದು. ಅಂತೆಯೇ ಬಸವಕಲ್ಯಾಣವು ಎಲ್ಲರದಾಗಿದೆ. ಅಖಿಲ ಭಾರತೀಯರಿಗೂ ಪುಣ್ಯಭೂಮಿ ಇದು ಬಸವಕಲ್ಯಾಣ. ಪೋಲೀಸ ಆ್ಯಕ್ಶನ್ ನಂತರ ಶ್ರೀ ಬಾಬಾಸಾಹೇಬ ವಾರದ ಹಾಗೂ ಇನ್ನಿತರ ಬಂಧು ಭಗಿನಿಯರ ಪರಿಶ್ರಮದ ಫಲವಾಗಿ ಬಸವಕಲ್ಯಾಣ ಕಾಣುವ ಭಾಗ್ಯ ಜನತೆಗೆ ಒದಗಿದೆ. ಶಿವಶರಣರಂತೆ ಶಿವರಣೆಯರೂ ಶಿವಾನುಭವಿಗಳಾಗಿ ತತ್ವವೇತ್ತ ರಾಗಿ ಬಾಳಿದರು." ಎಂದು ಹೇಳಿ, ಇಂದಿನ ಸ್ತ್ರೀಯರೂ ಅವರ ಆದರ್ಶ ಪಾಲಿಸ-ಬೇಕೆಂದು ಕರೆಯಿತ್ತರು.

೨೦. ಕರ್ನಾಟಕ ವಿಶ್ವವಿದ್ಯಾಲಯ ನಿರ್ಮಾಣಕ್ಕೆ ನಿಧಿ ಸಂಗ್ರಹಿಸಿ ನೀಡಿದ್ದು :

ಕರ್ನಾಟಕ ವಿಶ್ವವಿದ್ಯಾಲಯದ ನಿರ್ಮಾಣಕ್ಕಾಗಿ ನಿಧಿ ಸಂಗ್ರಹ ಸಪ್ತಾಹವನ್ನು (ಸಪ್ಟೆಂಬರ ೨೮ ರಿಂದ ಅಕ್ಟೋಬರ ೪ ವರೆಗೆ) ಆಚರಿಸಿ, ನಾಡಿನಾದ್ಯಂತದಿಂದ ಯೋಜನೆ ರೂಪಿಸಿ, ಉಪಕುಲಪತಿ ಡಿ. ಸಿ. ಪಾವಟೆಯವರು ಸಮಿತಿಗಳನ್ನು ನೇಮಿಸಿದ್ದರು. ವಿಜಾಪುರ-ಸೋಲಾಪುರ ಭಾಗಗಳಲ್ಲಿ ನಿಧಿ ಸಂಗ್ರಹಿಸಲು ಶರಣೆ ಜಯದೇವಿತಾಯಿ ಲಿಗಾಡೆ, ಶ್ರೀ ಎಚ್. ಎಫ್. ಕಟ್ಟಿಮನಿ, ಶ್ರೀ ಎಂ. ಎಸ್. ಸುಗಂಧಿ ಅವರನ್ನೊಳಗೊಂಡ ಮೂರು ಜನ ಸಮಿತಿಯನ್ನು ಶ್ರೀ ಪಾವಟೆಯವರು ನೇಮಿಸಿದ್ದರು. ತಾಯಿಯವರು ವಿಶೇಷ ಕಾಳಜಿ ವಹಿಸಿ ನಿಧಿ ಸಂಗ್ರಹಿಸಿ ಅರ್ಪಿಸಿ, ಶಿಕ್ಷಣ ಪ್ರೇಮವನ್ನು ಮೆರೆದರು.

೨೧. ಸಿದ್ಧರಾಮೇಶ್ವರ ಪುರಾಣದ ಮೆರವಣಿಗೆ :

ಜಯದೇವಿತಾಯಿಯವರು ಬರೆದ 'ಶ್ರೀ ಸಿದ್ಧರಾಮೇಶ್ವರ ಪುರಾಣ' ಮಹಾಕಾವ್ಯವು ೧೯೬೫ ರಲ್ಲಿ ಬೆಂಗಳೂರಲ್ಲಿ ಅದ್ದೂರಿಯಾಗಿ ಬಿಡುಗಡೆಗೊಂಡಿತು. ನಾಡಿನ ಹೆಸರಾಂತ ಸಾಹಿತಿಗಳು, ಲೇಖಕರು, ಕವಿಗಳು ಕನ್ನಡಾಭಿಮಾನಿಗಳು ಸೇರಿದ್ದರು. ಅನಂತರ ೧೯೬೯ ನವೆಂಬರ ೧ ರಂದು ಹುಬ್ಬಳ್ಳಿ ಮಹಾನಗರದಲ್ಲಿ ಕನ್ನಡ ರಾಜ್ಯೋತ್ಸವದ ದಿನ ಈ ಮಹಾಕಾವ್ಯದ ಮೆರವಣಿಗೆಯು ಆನೆಯ ಅಂಬಾರಿ ಮೇಲೆ ಜರುಗಿತು. ತಾಯಿಯವರು ಅಂಬಾರಿ ಮೇಲೆ ಕುಳಿತುಕೊಳ್ಳದೇ, ಕನ್ನಡದ ಕುವರಿಯಾಗಿ ಕನ್ನಡದ ಬಂಧುಗಳೊಂದಿಗೆ ಪಾದಯಾತ್ರೆಯ ಮೂಲಕ ಭಾಗವಹಿಸಿದರು. ಸದುವಿನಯ-ಸದಾಚಾರದ ಶರಣಜೀವನವನ್ನು ತೋರಿದರು. ನಾಡಿನ ಗಣ್ಯಮಾನ್ಯರು ಭಾಗವಹಿಸಿದ್ದರು.

೨೨. ಜಯದೇವಿತಾಯಿಯವರ ಸಾಹಿತ್ಯ ಸಾಧನೆ :

ಶರಣೆ ಜಯದೇವಿತಾಯಿಯವರು ಬಾಲ್ಯದಿಂದಲೂ ತಾಯಿ ಸಂಗವ್ವ ಬಾಯಿ ಅವರಿಂದ ಹಾಡುಗಾರಿಕೆ, ಪದರಚನೆಯ ಸಂಗೀತದ ಒಲವು ಪಡೆದು ಬೆಳೆದವರು. ಮರಾಠಿ ಭಾಷೆಯಲ್ಲಿ ೬ ನೇ ವರ್ಗದವರೆಗೆ ಶಾಲೆ ಕಲಿತ ಅವರು ಅನಂತರ ಎರಡು ಮಕ್ಕಳಾದ ಮೇಲೆ ಕನ್ನಡ ಓದು ಬರಹ ಕಲಿತರು. ಕನ್ನಡ-ಮರಾಠಿ ಎರಡೂ ಭಾಷೆಗಳಲ್ಲಿ ತಾಯಿಯವರು ಸಾಹಿತ್ಯ ರಚನೆ ಮಾಡಿದರು. ೧೯೫೦ ರಲ್ಲಿ "ಕನ್ನಡ ಕೋಟೆ ಪ್ರಕಾಶನ ಸೋಲಾಪುರ" ಎಂಬ ಪ್ರಕಾಶನ ಸಂಸ್ಥೆ ಸ್ಥಾಪಿಸಿ ಗ್ರಂಥ ಪ್ರಕಾಶನಕ್ಕೆ ನಾಂದಿ ಹಾಡಿದರು.

ಪೂಜ್ಯ ಜಯದೇವಿ ತಾಯಿ ಅವರಿಂದ ರಚಿತವಾದ ಪ್ರಕಟಿತ-ಅಪ್ರಕಟಿತ ಗ್ರಂಥಗಳು ಹೀಗಿವೆ -

ಅ. ಕನ್ನಡದ ಕೃತಿಗಳು (ಪ್ರಕಟಿತ) :

೧. ಜಯಗೀತೆ (ಜೂನ್ ೧೯೫೨)

೨. ತಾಯಿಯ ಪದಗಳು (ಜನೇವರಿ ೧೯೫೩)

೩. ಶ್ರೀ ಸಿದ್ಧರಾಮೇಶ್ವರ (ಜೂನ್ ೧೯೬೫)

೪. ತಾರಕ ತಂಬೂರಿ (ಜುಲೈ ೧೯೬೮)

೫. ಮಹಾವೀರವಾಣಿ (ಕನ್ನಡದಲ್ಲಿ ಅನುವಾದ ಗ್ರಂಥ) (೧೫-೬-೧೯೭೬)

೬. ಬಂದೇವು ಕಲ್ಯಾಣಕ (ಆಗಸ್ಟ ೧೯೭೨)
೭. ಸಾವಿರದ ಪದಗಳು (ಮಾರ್ಚ ೧೯೮೬)
೮. ಸಿದ್ಧರಾಮ-ಮಕ್ಕಳಿಗಾಗಿ ಬರೆದ ಗದ್ಯಕೃತಿ

ಬ. ಕನ್ನಡದ ಅಪ್ರಕಟಿತ ಕೃತಿಗಳು :

೧. ತ್ರಿಪದಿಗಳು, ಸಂಕೀರ್ಣಪದಗಳು (೪೦೦೦ ಮೇಲ್ಪಟ್ಟು)
೨. ದಾನಮ್ಮದೇವಿಯ ತ್ರಿಪದಿಗಳು (೫೬)

ಕ. ಮರಾಠಿಯಲ್ಲಿ ಪ್ರಕಟಿತ ಕೃತಿಗಳು :

೧. ಸಿದ್ಧವಾಣಿ (೧೯೫೨)
೨. ಬಸವದರ್ಶನ (೧೯೫೪)
೩. ಸಮೃದ್ಧ ಕರ್ನಾಟಕಾಚಿ ರೂಪರೇಷಾ (ಆಗಸ್ಟ್ ೧೫ - ೧೯೫೪)
೪. ಮಹಾಯೋಗಿನಿ (ಅಕ್ಕಮಹಾದೇವಿ) (೧೯೫೬)
೫. ಶ್ರೀ ಸಿದ್ಧರಾಮಾಂಚೀ ತ್ರಿವಿಧಿ (೧೯೫೮)
೬. ಬಸವ ವಚನಾಮೃತ (೧೯೬೬)
೭. ಸಿದ್ಧ ಲಿಂಗವಾಣಿ
೮. ಅಣ್ಣ ಬಸವಣ್ಣ
೯. ಶೂನ್ಯ ಸಂಪಾದನೆ

ಡ. ಮರಾಠಿಯ ಅಪ್ರಕಟಿತ ಕೃತಿಗಳು :

೧. ನೀಲಮ್ಮನ ವಚನಗಳು (೧೨೧) ವಚನಗಳ ಮರಾಠಿ ಅನುವಾದ
೨. ಹುತಾತ್ಮ ಹರಳಯ್ಯ-ಮಧುವಯ್ಯ ಜೀವನ-ಚರಿತ್ರೆ (೩೬೦ ಪದ್ಯಗಳ ಮರಾಠಿ ಸ್ವತಂತ್ರ ಕೃತಿ)
೩. ಅಕ್ಕಮಹಾದೇವಿ ಪುರಾಣ (೨೧೫೫ ಪದ್ಯಗಳ ಮರಾಠಿಯ ಸ್ವತಂತ್ರ ಕೃತಿ, ೪೦೦ ವಚನಗಳ ಅನುವಾದವೂ ಸೇರಿ)
೪. ಶ್ರೀ ಸಿದ್ಧರಾಮೇಶ್ವರ ಪುರಾಣ (ಕನ್ನಡ ಮೂಲದಿಂದ ಕೆಲವು ಮಾರ್ಪಾಟು ಸಹಿತ ೩೪೨೫ ತ್ರಿಪದಿಗಳು, ೧೦೯ ವಚನಗಳ ಅನುವಾದ)

೫. ಬಸವಣ್ಣನವರ ವಚನಗಳು (೬೦೦ ವಚನಗಳ ಮರಾಠಿ ಅನುವಾದ)

೬. ಮರಾಠಿ ಅನುಭಾವ ಪದಗಳು (೭೧೯ ತ್ರಿಪದಿಗಳು ಸ್ವತಂತ್ರ)

೭. ಸಿದ್ಧರಾಮೇಶ್ವರ ಓವಿಬದ್ಧ (ಮರಾಠಿ ಛಂದಸ್ಸು ೭೭೩ ಪದ್ಯಗಳು)

೮. ಶೂನ್ಯಸಂಪಾದನೆ (ಮಹಾರಾಷ್ಟ್ರ ಶಾಸನ ಸಾಹಿತ್ಯ ಆಣಿ ಸಂಸ್ಕೃತಿ ಮಂಡಳ ಪೂಣಾ. ವಹಿಸಿದ ಕಾರ್ಯದಲ್ಲಿ ಮುಕ್ಕಾಲು ಭಾಗ ಸಮಾಪ್ತಿ)

೩. ಹಿಂದಿ ಭಾಷೆಯಲ್ಲಿ ಬರೆದ ಅಪ್ರಕಟಿತ ಕೃತಿ :

೧. ಅಮರ ಬಾಪೂಜಿ (೮೬೦ ತ್ರಿಪದಿಗಳು)

೨೩. ಜಯದೇವಿ ತಾಯಿಯವರ ಗ್ರಂಥಗಳ ಪರಿಚಯ : (ಕನ್ನಡ ಕೃತಿಗಳು)

೧. ಜಯಗೀತೆ :

ಇದು ಶರಣೆ ಜಯದೇವಿತಾಯಿಯವರ ಸ್ವರಚಿತ ೪೦ ಕವಿತೆಗಳ ಮೊದಲ ಕವನಸಂಕಲನವಾಗಿದೆ. ತಾಯಿಯವರು ಬರೆದ ಈ ಕವಿತೆಗಳು ಅವರ ಹೃದಯದಿಂದ ಹೊರಹೊಮ್ಮಿದ ಭಾವ ಕುಸುಮಗಳಾಗಿವೆ. ಇಲ್ಲಿ ಜೀವನದ ನೋವು ನಲಿವುಗಳಿವೆ, ಬದುಕಿನ ಯಾತನೆಗಳಿವೆ, ಆಧ್ಯಾತ್ಮಸಾಧನೆಯ ಹಂಬಲವಿದೆ, ಜೀವಾತ್ಮಪರಮಾತ್ಮ-ನಲಿ ಬೆರೆತು ಒಂದಾಗುವ ಅಭೀಪ್ಸೆ ಇದೆ.

"ಓ ಎನ್ನು" ಎಂಬ ಕವಿತೆಯಲ್ಲಿ ದೇವನಿಗಾಗಿ ಹಂಬಲ ವ್ಯಕ್ತವಾಗಿದೆ-

ಸಿರಿವಂತರ ಕುವರಿ ಸಿರಿವಂತರ ಸತಿಯಾಗಿ
ಸಿರಿತನದ ಶೃಂಗಾರವೆಲ್ಲವನು ಭೋಗಿಸಿದೆ
ಸಿರಿತನ, ದೊರೆತನ ಹಿರಿಯತನ
ಎನ್ನನಾವರಿಸಿದೆ ಶ್ರೀ ಲೋಲನ ದರ್ಶನವು ಒಮ್ಮೆ ಇಲ್ಲ!

'ಓ ಎನ್ನೋ ಒಮ್ಮೆ ಓ ನನ್ನ ಸಿದ್ಧರಾಮ' ಎಂದು ಹಂಬಲಿಸುತ್ತಾರೆ ಈ ತಾಯಿ. 'ಜಯಗೀತ' ಎಂಬ ಕವಿತೆಯಲ್ಲಿ ಅವರ ಹೃದಯದ ಅಳಲು ಹಾಡಾಗಿ ಹೊರಹೊಮ್ಮಿದೆ -

ನಿನ್ನ ಭಜಿಸಲೆಂದು
ಉಲಿಯುವೆ ಜಯಗೀತ
ಒಂದೊಂದು, ನನ್ನ ಜೀಯಾ

ನಿನ್ನ ಬರುವಿಕೆಯ ಬಯಕೆ-
ಯನೆ ನೆನೆ ನೆನೆದು ಅಳ-
ಹೋಗಿ ಹಾಡಿ ಬಿಡುವೆ ॥

ರಜಾಕಾರರ ಹಾವಳಿಯಲ್ಲಿ ನೂರಾರು-ಸಾವಿರಾರು ಜನ ಎರಡೂ ಬಣಗಳಲ್ಲಿ ಕೊಲೆಯಾದರು. ಅದನ್ನು ಕಂಡ ತಾಯ್ಗರುಳು 'ಎಂದು?' ಕವಿತೆಯಲ್ಲಿ ಹೀಗೆ ಮಿಡಿದಿದೆ-

ನಮ್ಮವರು ಇನ್ನೂರು ಅವರವರು ಮೂನ್ನೂರು
ಒಂದು ಪ್ರಹರ ಕಾಳಗದಿ ಮಡಿದ ವಾರ್ತೆಯನು
ಓದಿ ಕುರುಳು ಕೊರಗುತಿದೆಯಲ್ಲ ಹಾ!
ಕೇಡು ಐನೂರು ಜೀವಗಳು ಎಂದು

ಕನ್ನಡಿಗರ ದುಸ್ಥಿತಿ ಬಗ್ಗೆ ಸಿದ್ಧಿಮಾಳ್ಕು ಕವಿತೆಯಲ್ಲಿ ಕಂಬನಿ ದುಂಬಿ ಹಂಪೆಯ ವಿರೂಪಾಕ್ಷನಲ್ಲಿ ಬೇಡುತ್ತಾರೆ -

ಕನ್ನಡಿಗರಾ ಹಂಪೆ ಕೊಂಪೆಯಾಗಿಹುದೀಗ
ಅಲೆದಲೆದು ನೋಡುವಷ್ಟು ಅಳಿದುಳಿದ ಹಂಪೆ,
...... ವಿರೂಪಾಕ್ಷ ಎಮಗಿಷ್ಟಸಿದ್ಧಿಯಂ ಮಾಳ್ಕು.

ಕರ್ಮಠ-ಧರ್ಮಾಂಧರನ್ನು ಕುರಿತು ಭೂಪಾಲನಲ್ಲಿ ಎಂಬ ಕವಿತೆಯಲ್ಲಿ ಆಕ್ರೋಶ ವ್ಯಕ್ತಗೊಳಿಸಿದ್ದಾರೆ-

ಜಗದ ಮಬ್ಬಿನ ಮೇಲೆ
ಮಠಮಾನ್ಯಗಳ ಕಟ್ಟಿ
ಪಂಥಗಳ ಹೂಡಿ ಭಾವಿಕರ
ಭ್ರಮೆಯಲ್ಲಿ ಆಚಾರಗುಡಿಗಟ್ಟಿ
ಕರ್ಮಠದ ಕಳಸಿತ್ತು
ಕುಳಿತಿಹರು ಕಣ್ಬೆಡುತ, ಪಾಪಿಗಳು-
ಅಲ್ಲಲ್ಲಿ ಮಹಾ ಪಾಪಿಗಳು;

"ಧರ್ಮ" ಕವಿತೆಯಲ್ಲಿ ಜಗದ ಮಕ್ಕಳನ್ನು ಏಳಿ, ಜಾಗೃತಗೊಳ್ಳಿ ಎಂದು ಎಚ್ಚರಿಸುತ್ತಾರೆ ತಾಯಿಯವರು-

ಏಳಿ ಜಾಗೃತಗೊಳ್ಳಿ ಜಗದ ಮಕ್ಕಳೇ ಏಳಿ
ಉಕ್ಕುತಿಹ ಉಪಟಳವ ಕಿತ್ತೊಗೆಯಲೇಳಿ
ದೊರೆತನವು ತಾವೊಂದು, ಹಿರಿತನವು ಮತ್ತೊಂದು
ಮರುವೇ ಎಂದೊಂದು ಭೂತಗಳ ಬಡಿದು-

ತಾಯಿಯವರ 'ಜಯಗೀತ'ವು ಕನ್ನಡಿಗರ ಜಯದ ಹೃದಯಗೀತವಾಗಿ ಮೂಡಿ ಬಂದಿದೆ.

೨. ತಾಯಿಯ ಪದಗಳು :

ಇದು ಜಯದೇವಿತಾಯಿ ಲಿಗಾಡೆಯವರು ಬರೆದ ಕನ್ನಡದ ಎರಡನೇ ಕೃತಿಯಾಗಿದೆ. ಈ ಗ್ರಂಥದ ಅರಿಕೆಯಲ್ಲಿ ತಾಯಿಯವರೇ ಹೇಳಿಕೊಂಡಿರುವಂತೆ- "ನಮ್ಮನಾಡಿನ ಜಾನಪದಗಳನ್ನು ಓದುತ್ತಿರುವಾಗ, ಕನ್ನಡದ ಜನಪದ ತಾಯಂದಿರು ಹಾಡಿರುವ ರೀತಿಯಲ್ಲಿ, ಧಾಟಿಯಲ್ಲಿ ಹೊಸಪದಗಳನ್ನು ಬರೆಯಬೇಕೆಂಬ ನನ್ನ ಇಷ್ಟವು ಪ್ರಬಲವಾಯಿತು. ನನ್ನ ವಿಚಾರಗಳನ್ನು, ಭಾವನೆಗಳನ್ನು ಒಡಮೂಡಿಸಲು ಈ ಜಾನಪದ ಧಾಟಿಯು ಒಳ್ಳೇ ಸಹಾಯಕವೆಂದು ನನಗೆ ಅನಿಸಿದ್ದರಿಂದ ಈ ಧಾಟಿಯಲ್ಲಿ ಬರೆಯಲು ಪ್ರಾರಂಭಿಸಿದೆ."

'ತಾಯಿಯ ಪದಗಳು' ಕನ್ನಡ ಸಾಹಿತ್ಯ ಲೋಕಕ್ಕೆ ಜಯದೇವಿತಾಯಿಯ-ವರು ನೀಡಿದ ಹೊಸ ಕೊಡುಗೆಯಾಗಿದೆ. ಆಧುನಿಕ ಕಾಲದಲ್ಲಿಯೂ ಸಹ ಪ್ರಾಚೀನ ಕಾಲದ ಗರತಿಯರಂತೆ ಪದಗಳನ್ನು ರಚಿಸುವ ಹೊಸ ಸಾಹಸಕ್ಕೆ ಇವು ದಾರಿ ಮಾಡಿಕೊಟ್ಟಿವೆ.

ಸಾವಿರ ನುಡಿಸರವ ಸರಗೊಳಿಸಿದೆನವ್ವಾ
ಸಾವೆಷ್ಟು ಅವಕ ಬದುಕೆಷ್ಟು। ನಾನರಿಯೆ
ಸಾವು ಬದುಕಿನ ದೊರೆಗೆ ಧರಿಸೇನ॥

ತಾಯಿಯವರು ಈ ಪದಗಳನ್ನು ತಮ್ಮ ಆರಾಧ್ಯದೇವ ಸಿದ್ಧರಾಮನಿಗೆ ಪದಪುಷ್ಪ ರೂಪದಲ್ಲಿ ಅರ್ಪಿಸಿದ್ದಾರೆ.

ಬಸವಾದಿ ಶರಣರ ಬಳವಿಡಿದು ಬಂದ ಈ ತಾಯಿ 'ಬಸವಣ್ಣನ ಕೂಸಾಗಿ' ಬದುಕಲು ಹಂಬಲಿಸಿದ್ದಾರೆ-

ಬಸವನ ನಾಡೀನ ಹಸನಾದ ಮನಸೀನ
ಅಸಮ ಶರಣರು ನನ್ನ ತವರವರು । ಕಲ್ಯಾಣದ
ಬಸವಣ್ಣನ ಕೂಸಾಗಿ ಬದುಕೇನ ॥

ಬುದ್ಧ-ಬಸವ-ಗಾಂಧೀಜಿ ತಾಯಿಯವರಿಗೆ ಅಪಾರ ಗೌರವದ ಮಹಾನ್ ವಿಭೂತಿಗಳು.

ಬುದ್ಧ ಬಸವನಾಗಿ ಬಸವ ಗಾಂಧೀಜಿಯಾಗಿ
ತಿದ್ಯಾರ ಆಗಾಗ ಆಚಾರ । ಲೋಕದಿ
ಶುದ್ಧ ಬೀಜವ ಬಿತ್ಯಾರ ॥

ಜಯದೇವಿಯವರು ಈ ಕೃತಿಯಲ್ಲಿ ಬಸವಾದಿ ಶರಣರ ಬಗ್ಗೆ, ಪುರಾತನರ ಬಗ್ಗೆ, ಕಿತ್ತೂರ ರಾಣಿ ಚೆನ್ನಮ್ಮ ಬೆಳವಡಿ ಮಲ್ಲಮ್ಮ ಕೆಳದಿ ಚೆನ್ನಮ್ಮ ಶಿವಾಜಿ ಬಗ್ಗೆ, ಶರಣರು, ಅಥಣಿ ಶಿವಯೋಗಿ, ಬೀಳೂರ ಶ್ರೀಗಳು, ತಾಯಿ- ತಂದೆಯರ ಬಗ್ಗೆ ರೈತರ ಬಗ್ಗೆ, ಗಾಂಧಿ, ನೆಹರು, ಪಟೇಲರ ಬಗ್ಗೆ, ಅಧ್ಯಾತ್ಮ ಸಾಧನೆಯ ಬಗ್ಗೆ ಹಾಗೂ ಲೋಕಾನುಭಾವ-ಶಿವಾನುಭಾವಗಳನ್ನು ತ್ರಿಪದಿಗಳಲ್ಲಿ ಹೊರಹೊಮ್ಮಿಸಿದ್ದಾರೆ.

ರೈತನ ಬಾಳಿನ ಬವಣೆಯ ಚಿತ್ರಣವನ್ನು ತಾಯಿಯವರು ನೀಡಿದ ರೀತಿ ಅದ್ಭುತವಾಗಿದೆ-

ಬಿತ್ತಿ ಬೆಳಸಿದ ಅನ್ನ, ಮರ್ತ್ಯಕ್ಕೆ ನೀಡ್ಯಾನ
ತುತ್ತ ಮಾಡಿ ತಾ ಉಣಿಸ್ಯಾನ । ಹೊಲದಣ್ಣ
ಬುತ್ತಿ ತನಗಿಲ್ದ ಕುಂತಾನ ॥

ನಾಲತ್ವಾಡದ ಶರಣರ ಬಗ್ಗೆ :
ವೀರೇಶ ಶರಣರು ಹರಕೆ ಕೊಟ್ಟಾರೆನಗೆ
ಕರಿದಿಪ್ಪಲಿಂಗದ ನಿಷ್ಠೇಲಿ । ಸಿಗುವುದು
ವರವು ಶಿವಯೋಗಿ ಸಿದ್ಧನ ॥

ಬೀಳೂರು ಅಜ್ಜ-ಗುರುಬಸವಸ್ವಾಮಿಗಳ ಬಗ್ಗೆ-
ಬೀಳೂರು ಗುರುಬಸವ ಎಳ್ಳಷ್ಟು ಗರುವಿಲ್ಲ.
ಎಳೆಯ ಮಕ್ಕಳ ತಿಳಿಮನ । ಗುರುರಾಯ
ಆಳ್ಯಾರ ಜನಮನವ ನಾಡೀನ ॥

ತಾಯಿಯವರಿಗೆ ತಮ್ಮ ತವರೂರ ಸೊಲ್ಲಾಪುರದ ಬಗ್ಗೆ ಎಲ್ಲಿಲ್ಲದ ಅಭಿಮಾನ, ತನ್ನೂರಿನ ಶರಣ-ಶರಣೆಯರನ್ನು ನೆನೆದಷ್ಟು ಆನಂದ-

ಶರಣರ ನೆಲೆ ನನ್ನ ತವರೂರು ಸೊಲ್ಲಾಪುರ
ವೀರೇಶ ಕಿರೀಟೇಶ ಸಿದ್ಧರಾಮ । ರೇವಣಸಿದ್ಧ
ವರಮಲ್ಲೇಶ ಶ್ರೀ ಗಂಗ ರುದ್ರಮ್ಮ॥

ಹೆತ್ತ ತಾಯಿ ಸಂಗಮ್ಮಳ ಬಗ್ಗೆ ಅಪಾರ ಪ್ರೀತಿ, ಗೌರವ ಈ ಜಯದೇವಿತಾಯಿಗೆ-

ಮನಿಗಾಗಿ ಮರಗಿಲ್ಲ ಮಕ್ಕಳಿಗಿ ಕೊರಗಿಲ್ಲ
ಕನ್ನಡ ತಾಯಿಯ ನುಡಿಗಾಗಿ । ಸಂಗಮ್ಮ
ಸೊನ್ನಲಗೀಲಿ ದುಡದೀ ನನ್ನ ಹೆತ್ತವ್ವ॥

ಈ ರೀತಿಯಾಗಿ ೧೦೦೦ 'ತಾಯಿಯ ಪದಗಳು' ಓತಪ್ರೋತವಾಗಿ ಹೊರಹೊಮ್ಮಿವೆ.

೩. ಶ್ರೀ ಸಿದ್ಧರಾಮೇಶ್ವರ ಪುರಾಣ :

ಇದು ಶರಣೆ ಜಯದೇವಿತಾಯಿಯವರು ಬರೆದ ಬೃಹತ್ ಕಾವ್ಯ. ತ್ರಿಪದಿ ಛಂದಸ್ಸಿನಲ್ಲಿ ಸರಳವಾಗಿ, ಸುಂದರವಾಗಿ, ತಿಳಿಗನ್ನಡದಲ್ಲಿ ರಚಿತವಾದ ಈ ಪುರಾಣ ಕಾವ್ಯವು ೪೧ ಸಂಧಿಗಳಲ್ಲಿ ೪೧೦೦ ಪದಗಳನ್ನೊಳಗೊಂಡಿದೆ. ಪ್ರಾರಂಭದ ಮಂಗಳ ಪದಗಳು ೨೭, ಕೊನೆಯ ಜಯಮಂಗಳ ಪದಗಳು ೨೯ ಸೇರಿ ಒಟ್ಟು ೪೧೫೬ ಪದ ಗಳಿವೆ. ಜೂನ್ ೧೯೬೫ ರಲ್ಲಿ ಪ್ರಕಟವಾದ ಈ ಕೃತಿಯ ಪ್ರಾರಂಭದಲ್ಲಿ ತಾಯಿಯವರು ಹೀಗೆ ಪದ ರಚಿಸಿರುವರು-

ಆಚಾರ ಉಚ್ಚಾರ ಎಚ್ಚರ ಎಂಬುವ
ಅಚ್ಚ ನಿಚ್ಚಾದ ತ್ರಿದಳದ । ಪತ್ತುರಿ
ಮುಚ್ಚಿತಂದೀದ ಮುಡಿಯಿರಿ ॥

'ಹತ್ತು ವರುಷಗಳ ಹಿದೆ ಹಮ್ಮಿಕೊಂಡ ಮಾತು ಇಂದು ಕೃತಿಯಾಗಿ ಮೈದಳೆದಿದೆ' ಎಂದು ತಾಯಿಯವರೇ ಹೇಳಿಕೊಂಡಿದ್ದಾರೆ.

"ಅದೆಂತಹ ಅಮೃತ ಮುಹೂರ್ತವೋ ನಾನರಿಯೆ; ಬಯಕೆ ಮೈದಾಲು ಮೊದಲಾಯಿತು. ಶಿವಸಿದ್ಧನ ಮಹಾಪುರಾಣವನ್ನೊರೆಯಲು ಪ್ರಾರಂಭಿಸಿದೆ. ಆದರೊಂದಚ್ಚರಿ! ಈ ಬಯಕೆ ಮೂಡಿದಂದಿನಿಂದ, ಸಿದ್ಧರಾಮನ ಕೃತಿರಚನೆ

ಕೈಗೊಂಡನಂದಿನಿಂದ ಹತ್ತು ನಿಟ್ಟಿನಿಂದಲೂ ವಿಪತ್ತುಗಳ ದಾಳಿ ನಡೆಯಿತು''

ತಾಳುವೆನು ಯಾತನೆಯ ಬಾಳುವೆನು ನಿನಗಾಗಿ
ಕಾಳ ಬಂದರೂ ಹೆದರೇನು । ಸಿದ್ಧರಾಮ
ದಾಳಿತಂದಿರುವೆ ಈ ದೇಹಕ ॥

ಯಾತನೆ, ನೋವು, ಕೊರಗು ಹೆಚ್ಚಿದಂತೆಲ್ಲ ಶಿವಯೋಗಿ ಸಿದ್ಧನ ಸ್ಮರಣೆ ಗಟ್ಟಿಗೊಂಡಿತು. ವೇದನೆಯಿಂದ ಬಳಲಿದ ಜೀವಕ್ಕೆ ಅಪಾರ ಕರುಣೆಯ ತುತ್ತು ಉಣಿಸಿದ ಸಿದ್ಧರಾಮ ಮರುಹುಟ್ಟು ಕೊಟ್ಟನು.

ಯೋಗಿ ಬಂದಾರೇನ । ಬಾಗಿ ಶರಣಾದೇನ
ಯೋಗದ ಕೀಲ ತಿಳಿಸುವರೇನ । ಸಿದ್ಧರಾಮ
ರಾಗ ಭೋಗದಾಚೆ ಒಯ್ವರೇನ ॥

ಎಂದು ತಾಯಿಯವರು ಹಂಬಲಿಸಿದರು. ಶರಣ ಸಿದ್ಧರಾಮ ಕರುಣೆಯ ಮಳೆ ಸುರಿಸಿದ. ಕೃತಿರಚನೆ ಭರದಿಂದ ಸಾಗಿತು. ಬರೆಯುತ್ತ ಹೋದಂತೆಲ್ಲ ಸಿದ್ಧರಾಮನ ಹರವಿಗೆ ತಕ್ಕಂತೆ ಹಿಗ್ಗುತ್ತ ನಡೆಯಿತು.

ನಿನ್ನ ಹುಟ್ಟಿನ ಊರು ಸೊನ್ನಲಾಪುರದೊಳು
ಎನ್ನನು ಪುಟ್ಟಿಸಿ ಬರೆಸಿದಿ ಸಿದ್ಧರಾಮ
ಕನ್ಯೆಯ ಮೇಲಿನ ಮಮತೆಯಲಿ ॥

ತಾಯಿಯ ಹೃದಯದಲ್ಲಿ ಸಿದ್ಧರಾಮ ಕುಳಿತು ಕಾವ್ಯ ಬರೆಯಿಸಿದ.

ಸೊನ್ನಲಿಗೆಯ ಮುದ್ದುಗೌಡ ಮತ್ತು ಸುಗ್ಗಲಾದೇವಿ ದಂಪತಿಗಳಿಗೆ ಅರವತ್ತು ವರುಷಗಳಾದರೂ ಮಕ್ಕಳಾಗಲಿಲ್ಲ. ಸೊನ್ನಲಾಪುರಕ್ಕೆ ಶ್ರೀ ರೇವಣಸಿದ್ಧರ ಆಗಮನ, ಸುಗ್ಗಲಾದೇವಿಯ ಮುಂದೆ ತಲೆಬಾಗಿ ಶರಣೆಂದು, 'ನಿನ್ನುದರದಿ ಘನಶಿವಯೋಗಿ ಉದಿಸುವನು' ಎಂದು ಹೇಳಿ ಶ್ರೀಗಿರಿಯತ್ತ ಹೊರಟುಹೋದರು. ಸಿದ್ಧರಾಮನ ಜನನ, ಹುಟ್ಟಾ ಮೌನಿ ಮಗು-ಧೂಳಿಮಾಕಾಳನಾಗಿ ಬೆಳೆದ. ದನ ಕಾಯುವ ಕಾರ್ಯ, ನವಣೆಯ ಹೊಲ, ಮಲ್ಲಯ್ಯನ ಆಗಮನ, ಸಿದ್ಧರಾಮ ಎಂದು ಕೂಗಿದ್ದು, ಆತಿಥ್ಯ ಪಡೆದುದು, ಸಿದ್ಧರಾಮ ಮಲ್ಲಯ್ಯನನರಸುತ್ತ ಶ್ರೀಶೈಲಕ್ಕೆ ಬಂದುದು, ಕಲ್ಲಿನ ಲಿಂಗವು ತನ್ನ ಮಲ್ಲಯ್ಯನಲ್ಲವೆಂದು ಹೇಳಿ, ಕಮ್ಮರಿ ಕೊಳದಲ್ಲಿ ಹಾರುತ್ತಿರಲು ಮಲ್ಲಯ್ಯ ಬಂದು ಕಾರುಣ್ಯಧಾರೆ ಹರಿಸಿದ್ದು.

ಸಿದ್ಧರಾಮ ಸಾಧನಗೈದು ಸೊನ್ನಲಗಿಗೆ ಮರಳಿ ಬಂದುದು, ಮಲ್ಲಿಕಾರ್ಜುನ ಗುಡಿ ಕಟ್ಟಿದುದು, ಕೆರೆ ಕಾಲುವೆ ಕಟ್ಟಿಸುವುದು, ಅರವಟ್ಟಿಗೆ ಏರ್ಪಡಿಸಿದುದು, ಆದಿಲಿಂಗದ ದರ್ಶನ, ಅನೇಕ ಪವಾಡ ಮೆರೆದುದು, ಬಿಲ್ಲೇಶ ಬೊಮ್ಮಯ್ಯನ ಪ್ರಸಂಗ, ಶಿವಶರಣ ಅಮುಗಿದೇವಯ್ಯ ದಂಪತಿಗಳ ಮಹಿಮೆ, ಸಿದ್ಧರಾಮನ ಶರಣಾಗತಿ, ಅನಂತರ ಅಲ್ಲಮ ಪ್ರಭುವಿನ ಆಗಮನ, ಹಠಯೋಗ ಸಿದ್ಧರ ಹಣೆಗಣ್ಣು -ಅಂಗಾಲಕಣ್ಣುಗಳ ಹೋರಾಟ, ಸಿದ್ಧರಾಮನ ಪಶ್ಚಾತ್ತಾಪ.

ಕರ್ಮಯೋಗಿ ಸಿದ್ಧರಾಮನು ಇಷ್ಟಲಿಂಗದ ಮಹತ್ವ ಅರಿಯಲು, ಅಲ್ಲಮ ನೊಂದಿಗೆ ಕಲ್ಯಾಣಕ್ಕೆ ಆಗಮನ, ಬಸವಗುರುವಿನ ಕಾರ್ಯವ್ಯಾಪ್ತಿ ಅರಿತದ್ದು, ಶರಣರ ಸಾನಿಧ್ಯ, ಅನುಭವ ಮಂಟಪದಲ್ಲಿ ಚಿಂತನ. ಚೆನ್ನಬಸವಣ್ಣನವರಿಂದ ಸಿದ್ಧರಾಮರಿಗೆ ಇಷ್ಟಲಿಂಗದೀಕ್ಷೆ, ಬಸವಗುರು ಸ್ತುತಿ, ಶರಣ-ಶರಣೆಯರಿಗೆ ಶರಣು, ಅನಂತರ ಗುರು ಮುಟ್ಟಿ ಗುರುವಾದ, ಅನುಭವಮಂಟಪದ ಶರಣರಾದ, ವಚನ ರಚನೆ, ಶರಣರ ಅನುಮತಿ ಪಡೆದು ಸೊನ್ನಲಿಗಿಗೆ ಶಿವಯೋಗಿಯಾಗಿ ಆಗಮನ, ಇತ್ತ ಕಲ್ಯಾಣದಲ್ಲಿ ಹರಳಯ್ಯ ಮಧುವಯ್ಯಳ ಮಕ್ಕಳ ಮದುವೆ, ಕಲ್ಯಾಣ ಕ್ರಾಂತಿ, ಶರಣರ ಕಗ್ಗೊಲೆ, ಬಸವಣ್ಣನವರು ಕಲ್ಯಾಣ ಬಿಟ್ಟು ಹೊರಟಿದ್ದು, ಬಿಜ್ಜಳದ ವಧೆ, ರಣಕಹಳೆ, ಶಿವಶರಣರ ಮೇಲೆ ದೌರ್ಜನ್ಯ, ಶಿವಯೋಗಿ ಸಿದ್ಧರಾಮರು ಸಹಾಯಕ್ಕೆ ಧಾವಿಸಿದುದು, ಚೆನ್ನಬಸವಣ್ಣ ಶೂನ್ಯಸಿಂಹಾಸನವನ್ನು ಸಿದ್ಧರಾಮರಿಗೆ ವಹಿಸಿದುದು, ಶರಣರ ಪಯಣ ಉಳಿವೆಯೆಡೆಗೆ, ಕೆಲವರು ಶ್ರೀಶೈಲ ಕದಳಿಯೆಡೆಗೆ.

ಕಲ್ಯಾಣಕ್ರಾಂತಿಯ ತರುವಾಯ, ಶರಣರೆಲ್ಲ ಮಹಾಲಿಂಗದೊಳು ಬಯಲಾದುದು, ಶಿವಯೋಗಿ ಸಿದ್ಧರಾಮನು ಸೊನ್ನಲಿಗೆಯಲ್ಲಿ ಬಯಲಾದುದು, ಸೊಲ್ಲಾಪುರವು ಅಂದಿನಿಂದ ಇಂದಿಗೂ ಪುಣ್ಯದ ನೆಲೆವೀಡಾಗಿ ಬೆಳಗುತ್ತಿದೆ.

ಶರಣರಿಗೆ ಬೀಡಾಗಿ ಪುರವಿದು ಬೆಳಗುವುದು
ಗುರುಲಿಂಗಜಂಗಮ ದಾಸೋಹ। ನಡೆವುದು
ಶರಣರು ಅವಿರತ ವಾಸಿಪರು॥
ಸಿದ್ಧರಾಮನ ಕರುಣೆ ಹೊದ್ದಿರುವ ಶಿಶುವಿಗೆ
ಬುದ್ಧಿಮನ ಚಿತ್ತಗಳ ಸುದ್ಧೈಸಿ। ಶರಣರು
ತಿದ್ದಿ ಬರೆಸಿದರು ಪುರಾಣವ॥

ಎಂದು ಜಯದೇವಿತಾಯಿಯವರು ಭಕ್ತಿಭಾವದಿಂದ, ಸದುವಿನಯದಿಂದ ನುಡಿದಿರುವರು.

೪. ತಾರಕ ತಂಬೂರಿ :

ಈ ಕೃತಿಯು ಜಯದೇವಿತಾಯಯುವರು ಆಗಾಗ ರಚಿಸಿದ ಅನುಭವ ಪದಗಳ ಸಂಕಲನವಾಗಿದೆ. ಇದರಲ್ಲಿ ಒಟ್ಟು ೪೦ ಪದಗಳಿವೆ. ಜುಲೈ ೧೯೬೮ ರಲ್ಲಿ ಪ್ರಕಟವಾದ ಈ ಕೃತಿಯಲ್ಲಿ ಅನುಭವದ ಕುಡಿಮಿಡಿಗಳು ಒಡೆದು ತಾಯಿಯ ಕರುಳು ಮಿಡಿದಿದೆ. ಈ ಅನುಭಾವ ಪದಗಳಲ್ಲಿ ಕರುಳಿನ ತಿರುಳನ್ನು ಅರಿತಾಗ ಹೃದಯ ಕರುಣೆಯ ವಾತ್ಸಲ್ಯದ ಮಡುವಾಗುತ್ತದೆ. ಭಕ್ತಿಯ ಬೀಡಾಗುತ್ತದೆ. ಆಗ ಬದುಕಿನ ವಿವಿಧ ಸ್ತರಗಳಲ್ಲಿ, ವಿವಿಧ ಮುಖಗಳಲ್ಲಿ ಸಿದ್ಧರಾಮನ ಲೀಲೆಯ ತೊಟ್ಟಿಲು ತೂಗುವುದನ್ನು ತಾಯಿ ಅನುಭವಿಸಿದ್ದಾರೆ.

ಅಕ್ಕತಾರ ತಂಬೂರಿ-ತಾರಕ್ಕ ತಂಬೂರಿ - ಇದು ಈ ತಂಬೂರಿ ಅಪಾರವಾದ ಇರುವಿನ ಅಂಬುಧಿಯಿಂದ ನಮ್ಮನ್ನು ದಾಟಿಸುವ ತಾರಕ. ಕೇವಲ ತಾರಕ್ಕ ತಂಬೂರಿ ಅಲ್ಲ, ತಾರಕ, ಕೇವಲ ತಾರಕ್ಕ ತಂಬೂರಿ ಅಲ್ಲ, ತಾರಕ ತಂಬೂರಿ, ತಾರಕನ ತಂಬೂರಿ, ಅಕ್ಕ ತಾರ ತಂಬೂರಿ.

ಹೀಗೆ ತಾರಕ ತಂಬೂರಿ, ತಂಬೂರಿಯಿಂದ ಆರಂಭವಾಗಿ ಕ್ಷಿತಿಜಗಳನ್ನು ನಾದದಲ್ಲಿ ತುಂಬಿ ಜೀವದ ಮಲತ್ರಯಗಳನ್ನು ಕಳೆದು, ಇಷ್ಟ ಪ್ರಾಣ ಭಾವಗಳನ್ನು ಮೀರಿ ಹಬ್ಬಿ ನಿನಾದಿಸುತ್ತದೆ. ಅವನ ಒಲುಮೆ ಹಾಡಿನ ಚಿಲುಮೆಯಾಗಿ ಪುಟಿಯುತ್ತದೆ. ಮಹಾನುಭಾವಿ ತಾಯಿಯ ಸಾಧನೆ ಚಿಂತನೆಗಳು ಹಾಡುವವರ ಕೇಳುವವರ ಅಂತಃಕರಣವನ್ನು ಸ್ಪರ್ಶಿಸಿ ಮನುಷ್ಯನನ್ನು ಸುತ್ತುವರೆದ ಜಾಡ್ಯ-ಜಂಜಡಗಳನ್ನು ಮರೆಯಿಸಿ, ಕಾಣದ ಮಹತ್ತಿನೆಡೆಗೆ ಕೊಂಡೊಯ್ಯುತ್ತವೆ. (ಪ್ರಕಾಶಕರ ನಮ್ಮ ಮಾತು)

ಜಯದೇವಿತಾಯಿಯವರು ತಮಗೆ ಬಂದ ದಾಟಿಯಲ್ಲಿ ಈ ಅನುಭವದ ಪದಗಳನ್ನು ರಚಿಸಿ, ಹಾಡಿದರು. ಈ ಹಾಡುಗಳನ್ನು ಕೇಳಿ ಆಯಾ ಪದಗಳಿಗೆ ರಾಗ-ತಾಳಗಳನ್ನು ಕಂಡುಹಿಡಿದು ಹೇಳಿಕೊಟ್ಟವರು ಗಾನವಿಶಾರದ ಪಂ. ಸಿದ್ಧರಾಮ ಜಂಬಲದಿನ್ನಿಯವರು.

ಈ 'ತಾರಕ್ಕ ತಂಬೂರಿ' ಕೃತಿಯಿಂದ ಕನ್ನಡ ನಾಡಿನ ಅನುಭವ ಪದಗಳ ಪರಂಪರೆಯನ್ನು ಜೀವಂತಗೊಳಿಸಿದ ಸಾಧನೆಯನ್ನು ನಾವು ಇಲ್ಲಿ ಕಾಣುತ್ತೇವೆ.

ಈ ಸಂಕಲನದ ಪದಗಳ ಕೊನೆಯಲ್ಲಿ 'ಜಯಸಿದ್ಧರಾಮ' ಎಂಬ ಅಂಕಿತ ವನ್ನು ತಾಯಿಯವರು ಬಳಸಿದ್ದಾರೆ. 'ತಾಯಿಯ ಪದಗಳು' ಗ್ರಂಥದಲ್ಲಿ ಒಂದು ತ್ರಿಪದಿ ಹೀಗಿದೆ-

ಕುಂಬಳ ಬಳ್ಳಿಯ ತುಂಬೆಲ್ಲ ಕುಂಬಳ
ತುಂಬುಚ್ಚಿ ಕಡಿಯಾಕ ಆಗಿಲ್ಲ। ಕುಂಬಳ
ತಂಬೂರಿಯಾಗಿ ನುಡಿದೀತ॥

ಈ ಗ್ರಂಥದ ಮೊದಲ ಪದ್ಯ ಹೀಗೆ ಪ್ರಾರಂಭವಾಗುತ್ತದೆ-

ತಾರಕ್ಕ ತಂಬೂರಿ ನಾನದಕೆ ನುಡಿಸುವೆ। ತಾರ ತಂಬೂರಿಯೆ
ಗುರುವಿನ ಅಗಣಿತ ಮಹಿಮೆಯ ಸಾರುವೆ ತಾರ ತಂಬೂರಿಯೆ॥

ಜಾನಪದ ದಾಟಿಯ ಇನ್ನೊಂದು ಪದದಲ್ಲಿ-

ತೋರೀದಿ ನಿಜರೂಪ ಬೀರಿದಿ ಶಿವತೇಜ ದೇವ ದೇವಾ
ಬೆರಗಾದೆ ನಿನ ಕಂಡು ಹಿರಿಹಿರಿ ಹಿಗ್ಗಿದೆ ಸಿದ್ಧರಾಮಾ॥

ಎಂದು ಭಾವತುಂಬಿ ಹಾಡಿದ್ದಾರೆ.

ವರನಿಗೆ, ವಧುವಿಗೆ ಬೋಧೆಯ ಪದಗಳಿವೆ. ಭೂಮದ ಪದ, ಕೂಸು ಒಪ್ಪಿಸುವ ಪದ, ಮುಂತಾದುವು ಸುಂದರವಾಗಿ ರಚಿತವಾಗಿವೆ. ಜೋಗುಳ ಪದ, ಆರತಿ ಪದ, ಮಂಗಲ ಪದಗಳೂ ಒಳಗೊಂಡಿವೆ.

೫. ಮಹಾವೀರವಾಣಿ :

ಮಧ್ಯಪ್ರದೇಶದ ಸುಪ್ರಸಿದ್ಧ ಹಿಂದಿ ಸಾಹಿತಿ, ಸಾಹಿತ್ಯ ಮಹೋಪಾಧ್ಯಾಯ ಡಾ॥ ಭಗವಾನದಾಸ ತಿವಾರಿ ಅವರು ಹಿಂದಿಯಲ್ಲಿ ಬರೆದು ಪ್ರಕಟಿಸಿದ್ದ 'ಮಹಾವೀರ ವಾಣಿ' ಎಂಬ ಗ್ರಂಥವನ್ನು ಜಯದೇವಿತಾಯಿಯವರು ಕನ್ನಡ ಅನುವಾದ ಮಾಡಿ, ೧೫-೦೬-೧೯೭೬ರಲ್ಲಿ ಪ್ರಕಟಿಸಿ, ಬಿಡುಗಡೆ ಮಾಡಿಸಿದರು. ಭಗವಾನ್ ಮಹಾವೀರರ ಜೀವನ ಸಾಧನೆ, ಸಂದೇಶಗಳನ್ನು ಒಳಗೊಂಡ ಕೃತಿಯಿದು.

೬. ಬಂದೇವು ಕಲ್ಯಾಣಕ :

ಜಯದೇವಿತಾಯಿಯವರು ಸಿದ್ಧರಾಮನ ಅಂತರಂಗದ ಆದೇಶದಂತೆ, ಬಸವಗುರುವಿನ ಹೃದಯದ ಕರೆಯಂತೆ, ಓಗೊಟ್ಟು ಸೊನ್ನಲಿಗೆಯಿಂದ ಅಂದು

ಸಿದ್ಧರಾಮ ಕಲ್ಯಾಣಕ್ಕೆ ಬಂದಂತೆ, ತಾಯಿಯವರು ಸೊಲ್ಲಾಪುರದಿಂದ ಬಸವಕಲ್ಯಾಣಕ್ಕೆ (೧೯೮೦ ನವಂಬರ್ ೫ ರಂದು) ದಯಮಾಡಿಸಿ, ಅನುಭವ ಮಂಟಪದ ಪಕ್ಕದಲ್ಲಿ ಭಕ್ತಿಭವನ ಕಟ್ಟಿಸಿಕೊಂಡು ನೆಲೆಸಿದರು.

೧೯೮೨ ಅಗಸ್ಟ ೧೫ ರಂದು 'ಬಂದೇವು ಕಲ್ಯಾಣಕ' ಎಂಬ ೩೦ ಪದಗಳ ಹಾಗೂ ಲಿಂಗಪೂಜೆಯ (೨೩ ತ್ರಿಪದಿಗಳ) ಪದಗಳ ಸಂಕಲನವನ್ನು ಪ್ರಕಟ ಗೊಳಿಸಿದರು.

ಮೊದಲ ಪದ 'ಬಂದೇವವ್ವ ತವರಿಗೆ'ಯಲ್ಲಿ ತಾಯಿಯವರು-

ಬಂದೇವವ್ವ ತವರಿಗೆ ಬಸವತಂದೆ ಬಂದೇವವ್ವ ತವರಿಗೆ
ತಂದೆ ತಾಯಂದಿರು ಬಳಗವು ಕಲ್ಯಾಣದಾಗಾ ॥ಪ॥

ಎಂದು ಹೃದಯ ತುಂಬಿ ಹಾಡಿದ್ದಾರೆ.

'ಬಸವನ ಹಸನಾದ ಯೋಗ' ಎಂಬ ಪದದಲ್ಲಿ

ಬಸವೇಶ ತೋರೋ ಬೇಗ।
ಹಸನಾದ ನಿನ್ನ ಯೋಗ ॥ಪ॥
ಹೆಣ್ಣು ಕೀಳೆಂಬ ಜಗದ ಕಣ್ಣೇನ ಕೊಳೆತೊಳೆದು।
ಹೆಣ್ಣಲ್ಲ ದೇವರೆಂದು ಬಣ್ಣೇಸಿ ಕರೆದ ತಂದೆ ॥೧॥

ಎಂದು ಬಸವತಂದೆಯಲ್ಲಿ ಪ್ರಾರ್ಥಿಸಿದ್ದಾರೆ ಜಯದೇವಿತಾಯಿಯವರು.

'ಗುರುಬಸವ' ಎಂಬ ಪದದಲ್ಲಿ ತಾಯಿಯವರು ಇಂದಿನ ಡಾಂಭಿಕ ಭಕ್ತರನ್ನು ವಿಡಂಬಿಸಿದ್ದಾರೆ.

ಅಣ್ಣಾ ಬೇಗ ನೋಡೋ ಕಣ್ಣು ತೆರೆದು ಬಸವ ॥ಪ॥
ನಿನ್ನ ಹೆಸರು ಬಳಸಿ ತನ್ನ ಹಿರಿಮೆಯನೆ ಮೆರೆಸುತಾ
ಸ್ವಾನುಭಾವ ಇಲ್ಲದಲೆ ಏನೋ ಎಂತೋ ಹೇಳುತಾ
ಜ್ಞಾನಹೀನರಾಗಿ ಸ್ಥಾನ ಬಯಸುವರು ॥೧॥

ಸುಳ್ಳು ತೋರಿ ಮಳ್ಳ ಮಾಡಿ ಕಳ್ಳತನದಿ ಸುಲಿವರು
ಗೊಳ್ಳುತನವ ಕಂಡು ಹಿಡಿದು ಒಳ್ಳೆದಾರಿ ತೋರ ಬಾ
ಅಳ್ಳೆದೆಯಲಿ ಧೈರ್ಯ ತುಂಬಿ ತುಳುಕಿಸಲು ॥೨॥

ದೀನದಲಿತ ಅಬಲೆಯರಿಗೆ ಹೀನವಾಗಿ ಕಾಣ್ಬರು
ಮಾನಕಂಜಿ ನಡೆವರಿಗೆ ಕಾಲಿನಿಂದ ತುಳಿವರು
ಅನುಭಾವಿಗೆ ನಿಜಸ್ಥಾನ ದೊರೆಯುಲಿಲ್ಲ ॥೩॥
ಕಾಯಕದಿ ಕಾಯದುಡಿತ ನ್ಯಾಯವಾಗಿ ನಡೆವ ನಡತೆ
ಮಾಯವಾಗಿ ಹೋಯಿತಲ್ಲ ಭಯವು ತಾ ಉಳಿಯಿತಲ್ಲ
ಜಯಸಿದ್ಧರಾಮನ ಗುರುವಿನ ಗುರುವೇ ॥೪॥
ಅಣ್ಣಾ ಬೇಗ ನೋಡೋ ಕಣ್ಣು ತೆರೆದು ಬಸವ ॥

೭. ಸಾವಿರದ ಪದಗಳು :

ಇದು ತಾಯಿಯವರು ಬರೆದ ೧೦೦೦ ತ್ರಿಪದಿಗಳ ಸಂಕಲನವಿದು. ಶ್ರೀ ಬಿ. ಎಸ್. ಸ್ವಾಮಿಯವರು ಸಂಪಾದಿಸಿ ೮-೩-೧೯೮೬ ರಲ್ಲಿ ಪ್ರಕಟಿಸಿದ್ದಾರೆ. ಈ ಸಂಗ್ರಹದಲ್ಲಿ ತಾಯಿಯವರು ಬರೆದು ಇಟ್ಟಿದ್ದ ಮೂರು-ನಾಲ್ಕು ಸಾವಿರ ಪದಗಳಲ್ಲಿ ಒಂದು ಸಾವಿರ ಆಯ್ದು ಪ್ರಕಟಿಸಿದ್ದಾರೆ.

ಈ ಸಂಕಲನದಲ್ಲಿ ಶರಣರ ಕುರಿತು, ಶಿವಯೋಗಿಗಳ ಕುರಿತು, ಶರಣೆಯರ ಕುರಿತು, ಹಂತಿಯ ಪದಗಳು, ಸಂಕೀರ್ಣ ಪದಗಳು ಸಂಕಲನಗೊಂಡಿವೆ.

ಬಸವಣ್ಣನವರ ಸಂದೇಶ ಕುರಿತ ಒಂದೆರಡು ತ್ರಿಪದಿಗಳು ಹೀಗಿವೆ-

ಬಸವ ಶತಮಾನವು ಹೊಸ ರೂಪ ತಾಳಿತು
ವಸುಧೆಗೆ ಇಳಿದು ಬಂದಿದೆ । ಜೀವಿಗಳ
ಲೇಸ ಬಯಸು ಅವಿರತ ॥

ಬಸವತತ್ವ ಬೀರಲು ವಸುಧಿಯೊಳಗೆಲ್ಲರು
ಹೊಸ ಚೇತನದಿ ಏಳಿರಿ । ಜಗವೆಲ್ಲ
ಹಸ ಮಾಡಲು ಒಳ ಹೊರಗೆಲ್ಲ ॥

೮. ಸಿದ್ಧರಾಮ :

ಇದು ಪೂಜ್ಯ ಜಯದೇವಿತಾಯಿಯವರು ಮಕ್ಕಳಿಗಾಗಿ ರಚಿಸಿದ ಸರಳ ಸುಂದರ ಗದ್ಯ ಕೃತಿಯಾಗಿದೆ. ಈ ಗ್ರಂಥವು ಕನ್ನಡ ನಾಡು ಮತ್ತು ಕನ್ನಡಿಗರ ಪರಂಪರೆ ಮಾಲಿಕೆಯಲ್ಲಿ ಪ್ರಕಟಗೊಂಡ ಈ ಪುಸ್ತಕವು- ಐ.ಬಿ.ಎಚ್. ಪ್ರಕಾಶನ ಬೆಂಗಳೂರು

ಇವರಿಂದ ಪ್ರಕಾಶನಗೊಂಡಿದೆ. ಈ ಪುಸ್ತಕದಲ್ಲಿ ಸಿದ್ಧರಾಮನ ಜೀವನ-ಸಾಧನೆ-ಸಿದ್ಧಿ -ಸಂದೇಶಗಳನ್ನು ವಚನಗಳ ಮೂಲಕ, ತ್ರಿಪದಿಗಳ ಮೂಲಕ ವಸ್ತುನಿಷ್ಠ, ವೈಚಾರಿಕ ವಿಚಾರಗಳನ್ನು ಗದ್ಯ ರೂಪದಲ್ಲಿ ಬರೆದಿರುವುದು ವಿಶೇಷವಾಗಿದೆ. ಶ್ರೀ ಸಿದ್ಧರಾಮೇಶ್ವರ ಪುರಾಣದಲ್ಲಿ ಬರುವ ಪವಾಡಗಳನ್ನು ಕೈಬಿಟ್ಟು, ಮಕ್ಕಳಿಗೆ ಕಥಾರೂಪದಲ್ಲಿ ಜೀವನ ಚರಿತ್ರೆ ತಿಳಿಯಪಡಿಸಿದ್ದಾರೆ. ಮಕ್ಕಳ ಸಾಹಿತ್ಯಕ್ಕೆ ತಾಯಿಯವರು ನೀಡಿದ ಅಮೂಲ್ಯ ಕೊಡುಗೆ ಇದಾಗಿದೆ.

೯. ಅರುವಿನಾಗರದಲ್ಲಿ :

ಪೂಜ್ಯ ತಾಯಿಯವರು ಮಹಾಲಿಂಗದೊಳು ಬಯಲಾದ ನಂತರ, ತಾಯಿಯವರ ೧೪೮೭ ತ್ರಿಪದಿ ಸಂಗ್ರಹದ ೧೦ ಶರಣ ಗೀತಗುಚ್ಛಗಳನ್ನೊಳಗೊಂಡಿರುವ 'ಅರುವಿನಾಗರದಲ್ಲಿ' ಎಂಬ ಕೃತಿಯನ್ನು ಶರಣ ಸಾಹಿತಿ ಡಾ॥ ಸಾ. ಶಿ. ಮರುಳಯ್ಯ-ನವರು ಸಂಪಾದಿಸಿದ್ದು, ಮಹತ್ವದ ಗ್ರಂಥವಾಗಿದೆ.

ಈ ಕೃತಿಯಲ್ಲಿಯ ತ್ರಿಪದಿಗಳಲ್ಲಿ ಲಿಂಗಾಯತ ಧರ್ಮದ ತತ್ವಗಳು, ಷಟ್‌ಸ್ಥಲ ದರ್ಶನ, ಷಡ್ವಿಧಭಕ್ತಿಯ ವಿಕಾಸ, ಲಿಂಗಾಂಗ ಸಾಮರಸ್ಯದ ಅನುಭಾವ ಮೂಡಿಬಂದಿದೆ. ಶರಣಗೀತ ಗುಚ್ಛದಲ್ಲಿ ಜಯಸಿದ್ಧರಾಮ, ಕಲ್ಯಾಣಬಸವ ಬಾರೋ, ನನ್ನಮ್ಮ ನಾಗಮ್ಮ, ಜ್ಞಾನಿಚೆನ್ನಬಸವನೆ ಮುಂತಾದ ಪದಗಳಿವೆ.

ಈ ಮೇಲಿನ ಕೃತಿಗಳಲ್ಲದೇ ತಾಯಿಯವರು ಬರೆದಿರುವ ಇನ್ನೂ ನಾಲ್ಕು ಸಾವಿರ ಮೇಲ್ಪಟ್ಟ ತ್ರಿಪದಿಗಳು, ಸಂಕೀರ್ಣ ಪದಗಳು ಹಾಗೆಯೇ (ಪ್ರಕಟವಾಗದೇ) ಉಳಿದಿದ್ದು, ಅವು ಎಲ್ಲಿವೆಯೆಂಬುದು ಸಂಶೋಧಿಸಬೇಕಾಗಿದೆ.

೧೦. ಮರಾಠಿಯಲ್ಲಿ ಪ್ರಕಟವಾದ ತಾಯಿಯವರ ಕೃತಿಗಳು :

ಪೂಜ್ಯ ಜಯದೇವಿತಾಯಿಯವರು ಬಾಲ್ಯದಲ್ಲಿ ಮರಾಠಿ ಶಾಲೆ ಕಲಿತಿದುದರಿಂದ ಕನ್ನಡದಷ್ಟೇ ಪ್ರಭಾವಪೂರ್ಣವಾಗಿ ಮರಾಠಿಯಲ್ಲಿಯೂ ಕೃತಿಗಳನ್ನು ರಚಿಸಿದ್ದಾರೆ.

೧) ಸಿದ್ಧವಾಣಿ, ೨) ಬಸವದರ್ಶನ, ೩)ಸಮೃದ್ಧ ಕರ್ನಾಟಕಾಚಿ ರೂಪರೇಷಾ, ೪) ಮಹಾಯೋಗಿನಿ (ಅಕ್ಕಮಹಾದೇವಿ), ೫) ಶ್ರೀ ಸಿದ್ಧರಾಮಾಂಚೀ ತ್ರಿವಿಧಿ, ೬) ಬಸವ ವಚನಾಮೃತ, ೭) ಸಿದ್ಧಲಿಂಗ ವಾಣಿ, ೮) ಅಣ್ಣ ಬಸವಣ್ಣ, ೯) ಶೂನ್ಯ ಸಂಪಾದನೆ ಮುಂತಾದ ಕೃತಿಗಳು ಮರಾಠಿ ಭಾಷೆಯಲ್ಲಿ ಪ್ರಕಟಗೊಂಡಿವೆ.

ಮಹಾರಾಷ್ಟ್ರದ ಲಿಂಗಾಯತರಿಗೆ, ಮರಾಠಿ ಭಾಷೆಯ ಮರಾಠಿಗರಿಗೆ ಬಸವಾದಿ ಶರಣರ ವಚನಸಾಹಿತ್ಯ, ಧರ್ಮ, ತತ್ವ, ಸಿದ್ಧಾಂತ, ಕನ್ನಡದ ಅನುಭಾವ ಸಾಹಿತ್ಯ, ಹೃದಯ ವಿಶಾಲತೆ, ವಿಶ್ವಬಂಧುತ್ವ, ಮಾನವೀಯತೆಯ ಸಂದೇಶವನ್ನು ತಾಯಿಯವರು ಮರಾಠಿ ಸಾಹಿತ್ಯ ಕೃತಿಗಳ ಮೂಲಕ, ವಚನಗಳ ಅನುವಾದ ತ್ರಿಪದಿಗಳ ರಚನೆಯ ಮೂಲಕ ಪರಿಚಯಿಸಿದರು.

ತಾಯಿಯವರು ಕನ್ನಡ-ಮರಾಠಿ ಜನಾಂಗಗಳ ಸಾಂಸ್ಕೃತಿಕ ಸೇತುವೆಯಾಗಿದ್ದರು. ಎರಡೂ ರಾಜ್ಯಗಳ ಜನ ತಮ್ಮವರೆಂದು ಗೌರವಿಸಿದರು. ಸಿದ್ಧರಾಮನ ವಚನಗಳು, ಬಸವೇಶ್ವರ ವಚನಗಳು, ಶೂನ್ಯಸಂಪಾದನೆ, ಸಿದ್ಧಲಿಂಗೇಶ್ವರ ವಚನಗಳು, ಸಿದ್ಧರಾಮನ ಬಸವಸ್ತೋತ್ರ ತ್ರಿವಿಧಿ, ಯೋಗಾಂಗ ತ್ರಿವಿಧಿ ಮುಂತಾದವನ್ನು ಮರಾಠಿಗೆ ತಾಯಿಯವರು ಅನುವಾದಿಸಿ ಪ್ರಕಟಿಸಿದ್ದಾರೆ.

೧೯೫೪ಳ ಅಗಸ್ಟ ೧೫ ರಂದು ಮರಾಠಿಯಲ್ಲಿ 'ಸಮೃದ್ಧ ಕರ್ನಾಟಕ ಕಾಚಿ ರೂಪರೇಷಾ' ಎಂಬ ಗದ್ಯ ಕೃತಿಯನ್ನು ಬರೆದು ಗಡಿಭಾಗದ ಮರಾಠಿಗರಿಗೆ, ಒಳನಾಡಿನ ಮಹಾರಾಷ್ಟ್ರದವರಿಗೆ ನೀಡಿದರು. ಈ ಗ್ರಂಥದಲ್ಲಿ - ಭಾವೀ ಅಖಂಡ ಕರ್ನಾಟಕದಲ್ಲಿ ಸಮಾವೇಶವಾಗಬೇಕಾದ ಭಾಗಗಳು, ಅವುಗಳಲ್ಲಿರುವ ಜನಸಂಖ್ಯೆಯನ್ನು, ಕ್ಷೇತ್ರವನ್ನು ಅಂಕಿ-ಸಂಖ್ಯೆಗಳೊಂದಿಗೆ ಚಿತ್ರಣ ನೀಡಿದ್ದಾರೆ. ಮೈಸೂರು ಸಂಸ್ಥಾನ, ಮುಂಬಯಿ ಪ್ರಾಂತದ ಕನ್ನಡ ಪ್ರದೇಶ, ಹೈದರಾಬಾದ ಪ್ರಾಂತದ ಕನ್ನಡ ಭಾಗ, ಮದ್ರಾಸ ಪ್ರಾಂತ, ಆಂಧ್ರ ಪ್ರಾಂತ, ಕೂರ್ಗ ಪ್ರಾಂತಗಳಲ್ಲಿರುವ ಕನ್ನಡ ಪ್ರದೇಶ, ಕನ್ನಡಿಗರ ಬಗ್ಗೆ ವಿವರ; ಕರ್ನಾಟಕದ ಸಾಂಪತ್ತಿಕ ಸ್ಥಿತಿ, ಹವಾಮಾನ ಮತ್ತು ಭೂಪ್ರದೇಶ, ನದಿಗಳು, ಜಲಪಾತಗಳು, ಭೂಗರ್ಭ ಸಂಪತ್ತು, ಅರಣ್ಯ ಸಂಪತ್ತು, ಸಮುದ್ರ ಸಂಪತ್ತು, ಪ್ರಾಣಿ ಸಂಪತ್ತಿನ ವಿವರ ನೀಡಿದ್ದಾರೆ.

ಕರ್ನಾಟಕದ ಸಾಹಿತ್ಯ ಮತ್ತು ಆಧ್ಯಾತ್ಮ ಎಷ್ಟೊಂದು ಸಮೃದ್ಧವಾಗಿದೆ ಎಂಬುದನ್ನು ಸಂಕ್ಷಿಪ್ತವಾಗಿ ನೀಡಿದ್ದಾರೆ. ಕರ್ನಾಟಕ ಸಂಗೀತ ಮತ್ತು ಶಿಲ್ಪ, ಧಾರ್ಮಿಕ ಸಹಿಷ್ಣುತಾ, ಕರ್ನಾಟಕ ಪ್ರಾಚೀನ ಇತಿಹಾಸ, ಕರ್ನಾಟಕದ ಅರ್ವಾಚೀನ ಇತಿಹಾಸ, ತಿಳಿಯಪಡಿಸಿ ಅಖಂಡ ಕರ್ನಾಟಕದ ರಚನೆ ಬಗ್ಗೆ ಮಹಾತ್ಮಾಗಾಂಧೀಜಿ, ನೆಹರೂ, ವಲ್ಲಭಭಾಯಿ ಪಟೇಲ, ರಾಜಗೋಪಾಲಾಚಾರಿ, ಎಸ್. ನಿಜಲಿಂಗಪ್ಪ, ಕೆಂಗಲ್ ಹನುಮಂತಯ್ಯ, ಬಾಳ ಗಂಗಾಧರ ಖೇರ, ಮುಂತಾದವರು ಹಾರ್ದಿಕ ಸ್ವಾಗತ ಮಾಡಿ ನೀಡಿದ ಹೇಳಿಕೆಗಳನ್ನು ಪ್ರಾಂತ ಪುನರ್ ರಚನೆಯ ಅವಶ್ಯಕತೆಯನ್ನು ಬೇರೆ ಬೇರೆ

ರಿಪೋರ್ಟ್, ಕಮಿಟಿ, ಕಮಿಶನ್‌ಗಳ ಹೇಳಿಕೆಗಳನ್ನು ಪ್ರಕಟಿಸಿದ್ದಾರೆ.

ಈ ಮೂಲಕ ಸಮೃದ್ಧ ಕರ್ನಾಟಕದ ರೂಪರೇಷೆಗಳನ್ನು ನಿರೂಪಿಸಿದ ತಾಯಿಯವರ ಈ ಮಹಾನ್ ಕೃತಿಯು ಚಿರಸ್ಮರಣೀಯವಾದುದು.

೧೧. ಅಪ್ರಕಟಿತ ಮರಾಠಿ ಕೃತಿಗಳು :

ಬಸವಾದಿ ಶರಣರ ವಚನಗಳಲ್ಲಿ, ಅನುಭಾವ ಪದಗಳು, ಶ್ರೀ ಸಿದ್ಧರಾಮೇಶ್ವರ ಪುರಾಣ, ಅಕ್ಕಮಹಾದೇವಿ ಪುರಾಣ, ಹರಳಯ್ಯ-ಮಧುವಯ್ಯಗಳ ಚರಿತ್ರೆ, ಮುಂತಾದ ೮-೧೦ ಕೃತಿಗಳು ಅಪ್ರಕಟಿತವಾಗಿಯೇ ಉಳಿದಿವೆ.

ಹಿಂದಿಯಲ್ಲಿ ಬರೆದ 'ಅಮರ ಬಾಪೂಜಿ' ಎಂಬ ೮೬೦ ತ್ರಿಪದಿಗಳ ಗ್ರಂಥವು ಅಪ್ರಕಟಿತವಾಗಿಯೇ ಉಳಿದಿದೆ.

೨೪. ಕನ್ನಡ ನಾಡು ನುಡಿ ಸೇವೆ -ಏಕೀಕರಣದ ಹೋರಾಟಗಾರ್ತಿ :

ಜಯದೇವಿತಾಯಿ ಲಿಗಾಡೆಯವರು ಕನ್ನಡ ನಾಡು-ನುಡಿಗಾಗಿ ಸಲ್ಲಿಸಿದ ಸೇವೆ, ಕರ್ನಾಟಕ ಏಕೀಕರಣಕ್ಕಾಗಿ ನಡೆಸಿದ ಪ್ರಯತ್ನ, ಹೋರಾಟ ಅಪ್ರತಿ-ಮವಾದುದು.

ಭಾರತದ ಸ್ವಾತಂತ್ರ್ಯ ಪೂರ್ವದಿಂದಲೂ ತಾಯಿಯವರು ರಾಷ್ಟ್ರದ ಬಗ್ಗೆ ನಾಡು-ನುಡಿಯ ಬಗ್ಗೆ ಅಭಿಮಾನ ತಾಳಿದವರು. ೧೯೩೦ ರಲ್ಲಿಯೇ ಖಾದಿಯ ಬಿಳಿ ಸೀರೆ ಉಡಲು ನಿರ್ಧರಿಸಿದವರು. ಸಮಾಜೋ-ಧಾರ್ಮಿಕ ರಂಗಗಳಲ್ಲಿ ಸೇವೆ, ಶಿಕ್ಷಣ-ಅಕ್ಷರ ಪ್ರಸಾರದಲ್ಲಿ ಸೇವೆ, ಮಹಿಳಾ ಸಂಘಟನೆ, ಅಖಿಲಭಾರತ ವೀರಶೈವ ಪರಿಷತ್, ಮಹಾಸಭೆಗಳಲ್ಲಿ ಭಾಷಣ, ಅಕ್ಕನ ಬಳಗ, ಅಕ್ಕನ ಜಯಂತಿ, ಬಸವ ಜಯಂತಿಗಳಲ್ಲಿ ಭಾಷಣಗಳು, ಜನಜಾಗೃತಿ ಮಾಡುತ್ತಿದ್ದರು.

ಲಿಂಗಾಯತರ ಧರ್ಮಭಾಷೆ ಕನ್ನಡ, ವಚನ ಗ್ರಂಥಗಳು ಕನ್ನಡದಲ್ಲಿದ್ದುದ ರಿಂದ ಈ ಒಲವು ಸಹಜವಾಗಿಯೇ ತಾಯಿಯವರಲ್ಲಿ ಕನ್ನಡ-ನಾಡು-ನುಡಿಗಳ ಬಗ್ಗೆ ಅಭಿಮಾನ ಮೂಡಿಸಿತೆನ್ನಬಹುದು.

ಅಗಸ್ಟ ೧೪, ೧೯೪೨ ರಂದು ಮಧ್ಯರಾತ್ರಿ ೧೨ ಗಂಟೆಗೆ ಜಯದೇವಿ ತಾಯಿ ಹಾಗೂ ಅವರ ಸಂಘಟನೆಯ ಪ್ರೌಢ ಮಹಿಳೆಯರು ಸಿದ್ಧರಾಮೇಶ್ವರ ಗುಡಿ ಎದುರಿನ ಹೊಂಡದಲ್ಲಿ ಮಿಂದು, ಹಿಂದುಸ್ಥಾನದ ಸ್ವಾತಂತ್ರ್ಯ ಅಜರಾಮರವಾಗಲಿ' ಎಂದು ಜಯಘೋಷ ಮಾಡಿ, ಸಿದ್ಧರಾಮನಿಗೆ ಪೂಜೆ ಸಲ್ಲಿಸಿ, ಪ್ರಸಾದ ಹಂಚಿದರು.

ಮುಂದೆ, ದೇವಿ ವಿಭಜನೆಯ ಕರಾಳ ದಿನಗಳು, ಹಿಂದೂ-ಮುಸ್ಲಿಂ ಕಲಹ, ಕಗ್ಗೊಲೆಗಳು, ಗಾಂಧೀಜಿಯವರ ಹತ್ಯೆ ರಾಷ್ಟ್ರದಲ್ಲಿ ವ್ಯಾಪಿಸಿದ ಹಿಂಸಾಚಾರ, ಇವುಗಳಿಂದ ಹಳ್ಳಿ-ಪಟ್ಟಣಗಳು ತಲ್ಲಣಗೊಂಡವು. ತಾಯಿಯವರು ಸೊಲ್ಲಾಪುರ ಹಾಗೂ ಇನ್ನಿತರ ಭಾಗಗಳಲ್ಲಿ ಸಭೆ ನಡೆಸಿ, ಮಹಾತ್ಮರ ಸತ್ಯ-ಅಹಿಂಸೆ-ಶಾಂತಿ-ಪ್ರೀತಿ-ಸಹಬಾಳ್ವೆಯ ವಿಚಾರಗಳನ್ನು ಎಲ್ಲ ಜಾತಿಯ ಜನರ ಮನ ಮುಟ್ಟುವಂತೆ ಭಾಷಣಗಳ ಮೂಲಕ ತಿಳಿಸುತ್ತಿದ್ದರು.

ಸ್ವಾತಂತ್ರ್ಯ ಪೂರ್ವದಲ್ಲಿಯೇ **ಕರ್ನಾಟಕ ಏಕೀಕರಣ ಚಳುವಳಿಯು** ಪ್ರಾರಂಭವಾಗಿತ್ತು. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಕನ್ನಡ ನಾಡು ೨೦ ಕ್ಕಿಂತಲೂ ಹೆಚ್ಚು ಆಡಳಿತ ವಿಭಾಗಗಳಲ್ಲಿ ಹರಿದು-ಹಂಚಿಹೋಗಿತ್ತು. ಮೈಸೂರು ಸಂಸ್ಥಾನ, ಕೊಡಗು, ಮದ್ರಾಸ ಪ್ರಾಂತದಲ್ಲಿ ಬಳ್ಳಾರಿ, ದಕ್ಷಿಣ ಕನ್ನಡ, ಕೊಳ್ಳೇಗಾಲ, ಮುಂಬಯಿ ಪ್ರಾಂತದಲ್ಲಿ ಬೆಳಗಾವಿ, ವಿಜಾಪುರ, ಧಾರವಾಡ, ಉತ್ತರ ಕನ್ನಡ ಜಿಲ್ಲೆಗಳು, ಹೈದರಾಬಾದ ಸಂಸ್ಥಾನ ದಲ್ಲಿ ಗುಲಬರ್ಗಾ, ಬೀದರ, ರಾಯಚೂರ ಜಿಲ್ಲೆಗಳು, ಇವಲ್ಲದೇ ಕೇಂದ್ರ ಸರ್ಕಾರದ ನೇರ ಆಡಳಿತದಲ್ಲಿ ಬೆಂಗಳೂರು, ಬೆಳಗಾವಿ, ಬಳ್ಳಾರಿ ದಂಡು ಪ್ರದೇಶಗಳು, ಜತ್, ಮುಧೋಳ್, ಸಂಡೂರ್, ಸವಣೂರು, ಸಾಂಗ್ಲಿ, ಮೀರಜ್, ಜಮಖಂಡಿ, ರಾಮದುರ್ಗ ಮುಂತಾದವು ಸಂಸ್ಥಾನಿಕರ ಆಡಳಿತಕ್ಕೆ ಒಳಪಟ್ಟಿದ್ದವು.

ಕರ್ನಾಟಕ ಏಕೀಕರಣ ಸಲುವಾಗಿ, ಕನ್ನಡ ನಾಡು-ನುಡಿ ಜಾಗೃತಿಗಾಗಿ ೧೮೯೦ ರಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ, ೧೯೦೭ ರಲ್ಲಿ ಕರ್ನಾಟಕ ಸಭಾ, ೧೯೧೫ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾದವು. ಕನ್ನಡದ ಹೋರಾಟಕ್ಕೆ ಜೀವಬಂದಿತು. ೧೯೧೭ ರಲ್ಲಿ ಆಲೂರ ವೆಂಕಟರಾಯರು 'ಕರ್ನಾಟಕದ ಗತವೈಭವ' ಪ್ರಕಟಿಸಿ ಕನ್ನಡಿಗರನ್ನು ಬಡಿದೆಬ್ಬಿಸಿದರು. ೧೯೨೪ **ರಲ್ಲಿ ಬೆಳಗಾವಿಯಲ್ಲಿ ಸರ್ ಸಿದ್ದಪ್ಪ ಕಂಬಳಿ ಅವರ ಅಧ್ಯಕ್ಷತೆಯಲ್ಲಿ ಪ್ರಥಮವಾಗಿ ಕರ್ನಾಟಕ ಏಕೀಕರಣ ಸಮ್ಮೇಳನವು ನಡೆಯಿತು.**

೧೯೧೫ ರಿಂದ ಕನ್ನಡ ಸಾಹಿತ್ಯ ಸಮ್ಮೇಳನಗಳು ಪ್ರಾರಂಭವಾಗಿ, ಕನ್ನಡದ ಕಹಳೆ ಪ್ರಾರಂಭಿಸಿದ್ದವು. ೧೯೨೭ ರಲ್ಲಿ ಕರ್ನಾಟಕ ಏಕೀಕರಣದ ಗುರಿ ಸಾಧನೆಗಾಗಿ ಶ್ರೀ ಫ. ಗು. ಹಳಕಟ್ಟಿಯವರು **'ನವಕರ್ನಾಟಕ'** ವಾರಪತ್ರಿಕೆ ಪ್ರಾರಂಭಿಸಿದರು. ಅನೇಕ ಕನ್ನಡ ದಿನಪತ್ರಿಕೆಗಳು, ವಾರಪತ್ರಿಕೆಗಳು, ಪಾಕ್ಷಿಕಗಳು ಜಾಗೃತಿ ಪ್ರಾರಂಭಿಸಿದವು.

೧೯೩೬ರಲ್ಲಿ ೧೦ ನೇ ಕರ್ನಾಟಕ ಏಕೀಕರಣ ಸಮ್ಮೇಳನವು ಮುಂಬಯಿಯಲ್ಲಿ ಜರುಗಿತು. ಆಗ ಬಿ.ಜಿ. ಖೇರ, ವಲ್ಲಭಬಾಯಿ ಪಟೇಲರು ಭಾಗವಹಿಸಿದ್ದರು. ಜಯದೇವಿತಾಯಿಯವರು ಇದರಲ್ಲಿ ಪಾಲ್ಗೊಂಡು ತಮ್ಮ ವಿಚಾರಗಳನ್ನು ತಿಳಿಸಿದರು.

ಹೈದರಾಬಾದ ನಿಜಾಮ ಪ್ರಾಂತದಲ್ಲಿ ಕನ್ನಡ ಹೆಸರಿಲ್ಲದಂತೆ ಬದುಕಿತ್ತು. ಜಹಿರಾಬಾದಿನಲ್ಲಿ ಶ್ರೀ ಅಡಿವೆಪ್ಪ ಚಂದ್ರೆ, ಪ್ರಭುರಾವ ಕಂಬಳಿಬಾಬಾ, ಶ್ರೀ ಭೀಮಣ್ಣಾ ಖಂಡ್ರೆ, ಶ್ರೀಮತಿ ಜಯದೇವಿತಾಯಿ ಲಿಗಾಡೆ ಸಭೆ ನಡೆಸಿದರು. ನಿಜಾಮನ ಆಜ್ಞೆ ಮೀರಿ, ಉಲ್ಲಂಘಿಸಿ ತಾಯಿಯವರು ಭಾಷಣ ಮಾಡಿ ಬಂದರು. ಭಾಲ್ಕಿ, ಉದ್ಗೀರ ತಾಲೂಕುಗಳಲ್ಲಿ ಹೇರಿದ್ದ ಮೂರುಪಟ್ಟು ತೆರಿಗೆಗಳ ವಿರುದ್ಧ ಹೋರಾಡಿ, ರದ್ದು ಪಡಿಸಲು ಯತ್ನಿಸಿ, ಅದನ್ನು ಕಡಿಮೆ ಮಾಡಿಸಿದರು.

ರಜಾಕರ ಹಾವಳಿಯಿಂದ ನಿರಾಶ್ರಿತರಾಗಿ ವಲಸೆ ಬಂದ ಸಾವಿರಾರು ಕನ್ನಡಿಗರಿಗೆ ಆರು ತಿಂಗಳ ಕಾಲ ವಸತಿ-ಆಶ್ರಯ-ಆಹಾರ-ಔಷಧ ನೀಡಿ ರಕ್ಷಿಸಿದ ಕೀರ್ತಿ ಜಯದೇವಿತಾಯಿಯವರಿಗೆ ಹಾಗೂ ಅವರ ಬಳಗಕ್ಕೆ ಸಲ್ಲುತ್ತದೆ.

೧೯೪೭ ರಲ್ಲಿ ದೇಶ ಸ್ವಾತಂತ್ರ್ಯವಾದರೂ ಭಾಷಾವಾರು ಪ್ರಾಂತಗಳ ರಚನೆಯ ಬಗ್ಗೆ ಬೇಗ ನಿರ್ಧಾರವಾಗಲಿಲ್ಲ. ೧೯೪೭ ಡಿಸೆಂಬರ್‌ದಲ್ಲಿ ಅಖಿಲ ಕರ್ನಾಟಕ ಏಕೀಕರಣ ಪರಿಷತ್ತು ಕರ್ನಾಟಕ ರಾಜ್ಯ ಬೇಗನೇ ರಚನೆಯಾಗಬೇಕೆಂದು ಕೇಂದ್ರ ಸರಕಾರಕ್ಕೆ ಆಗ್ರಹಿಸಿತು. ಭಾರತ ಸರಕಾರವು ನೇಮಿಸಿದ್ದ 'ಧಾರ್' ಸಮಿತಿಯು ಭಾಷಾವಾರು ಪ್ರಾಂತಗಳ ರಚನೆಗೆ ವಿರೋಧ ವ್ಯಕ್ತಪಡಿಸಿದ್ದರಿಂದ ಕರ್ನಾಟಕ-ಆಂಧ್ರ ಪ್ರದೇಶಗಳಲ್ಲಿ ಚಳವಳಿ ತೀವ್ರಗೊಂಡಿತು.

ಅಖಂಡ ಕರ್ನಾಟಕ ಏಕೀಕರಣದ ಸಂಘದ ಉಪಾಧ್ಯಕ್ಷೆಯಾಗಿದ್ದ ಜಯದೇವಿತಾಯಿಯವರು ಧಾರ್ ಆಯೋಗದ ಎದುರು ಸೊಲ್ಲಾಪುರ ಮೊದಲುಗೊಂಡು ಗಡಿನಾಡಿನ ಪ್ರದೇಶಗಳು ಅಖಂಡ ಕರ್ನಾಟಕದಲ್ಲಿರಬೇಕೆಂದು ಕೇಳಿದ್ದರು. ಧಾರ್ ವರದಿ ಪ್ರಕಾರ ಸೊಲ್ಲಾಪುರವು ಎರಡು ತಾಲೂಕುಗಳಲ್ಲಿ ಒಡೆಯಿತು.

ಅನಂತರ ಜವಹರಲಾಲ ನೆಹರು, ವಲ್ಲಭಭಾಯಿ ಪಟೇಲ, ಪಟ್ಟಾಭಿ ಸೀತಾರಾಮಯ್ಯ (ಜೆ.ವ್ಹಿ.ಪಿ.) ಆಯೋಗವು ೧-೪-೧೯೪೯ ರಲ್ಲಿ ಒಪ್ಪಿಸಿದ ವರದಿಯು ಆಂಧ್ರ ಪ್ರದೇಶ ಪ್ರಾಂತ ರಚನೆ ಮಾತ್ರ ಒಪ್ಪಿ, ಕರ್ನಾಟಕ ಪ್ರಾಂತ ರಚನೆಯ ಬೇಡಿಕೆಯನ್ನು ತಿರಸ್ಕರಿಸಿತು. ಆಗ ಜಯದೇವಿತಾಯಿಯವರು ಜೆ.ವ್ಹಿ.ಪಿ. ಆಯೋಗದ ವರದಿಯನ್ನು ವಿರೋಧಿಸಿ ಕರ್ನಾಟಕದ ಪ್ರತಿನಿಧಿಗಳು ಕೇಂದ್ರ ಮತ್ತು ಶಾಸನ ಸಭೆ

ಗಳಿಗೆ ರಾಜೀನಾಮೆ ಕೊಡಬೇಕು ಎಂದು ಗೊತ್ತುವಳಿ ಪಾಸು ಮಾಡಿ ಕಳಿಸಿದರು. ಕರ್ನಾಟಕದಲ್ಲಿ ಉಗ್ರ ಹೋರಾಟ ಪ್ರಾರಂಭವಾಯಿತು. ನಾಗಪ್ಪಣ್ಣ ಕಾಡಾದಿ, ಶ್ರೀ ಎಸ್. ನಿಜಲಿಂಗಪ್ಪನವರು ಮುಂತಾದ ಧುರೀಣರು ಶಾಸನಸಭೆಗಳಿಗೆ ರಾಜೀನಾಮೆ ಕೊಟ್ಟರು.

ಏಕೀಕರಣ ಚಳುವಳಿ ತೀವ್ರಗೊಂಡಿತು. ತಾಯಿಯವರು ಸೊಲ್ಲಾಪುರದಲ್ಲಿ **'ಕನ್ನಡ ಕೋಟೆ ಪ್ರಕಾಶನ ಸೊಲ್ಲಾಪುರ'** ಎಂಬ ಸಂಸ್ಥೆಯನ್ನು ೧೯೫೦ ರಲ್ಲಿ ಪ್ರಾರಂಭಿಸಿ, ಸಾಹಿತ್ಯ ಪ್ರಕಟಣೆಗಳ ಮೂಲಕ, ಭಾಷಣಗಳ ಮೂಲಕ ಜಾಗೃತಿ ಪ್ರಾರಂಭಿಸಿದರು. **೧೯೫೦ ಡಿಸೆಂಬರ್ ೧೬ ಮುಂಬೈಯಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದ ಮಹಿಳಾಗೋಷ್ಠಿ ಅಧ್ಯಕ್ಷತೆ** ವಹಿಸಿ ಭಾಷಣ ನೀಡಿದರು.

೧೯೫೧ ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ತ್ಯಾಗಪತ್ರ ನೀಡಿ, ಸ್ವತಂತ್ರವಾಗಿ ಹೋರಾಟ ಪ್ರಾರಂಭಿಸಿದರು. ೧೯೫೨ ರಲ್ಲಿ **ಬೇಲೂರಿನಲ್ಲಿ** ಜರುಗಿದ ೩೫ನೇ **ಅಖಿಲ ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ** ಕನ್ನಡ ನಾಡಿನ ಏಕೀಕರಣ ಕುರಿತು ಮಾತಾಡುತ್ತಾ- "ಉದಯ ವಾಗಲಿ ನಮ್ಮ ಚೆಲುವ ಕನ್ನಡ ನಾಡು ಎಂದು ಬರಿದೆ ಹಾಡುವಿರೇಕೆ ? ನಡುನಾಡಿ ನಲ್ಲಿರುವ ಕನ್ನಡಿಗರು ನೀವು. ಗಡಿನಾಡಿನಲ್ಲಿರುವ ಕನ್ನಡತಿ ನಾನು. ನಮ್ಮ ಕಷ್ಟ ನಾವು ತಲೆಕೊಟ್ಟಿರುವ ತುಳಿತ ನಿಮಗೆ ಇವೆಂತು ಗೊತ್ತಾದೀತು ? ಅಣ್ಣಂದಿರೇ ಸೊಲ್ಲಾಪುರದ ಗೊಡವೆ ಏಕೆ ಎಂದೆನ್ನುವಿರಾ? ಇಂದು ಸೊಲ್ಲಾಪುರಕ್ಕೆ ಒದಗಿದ ಗತಿ ನಾಳೆ ಬೇಲೂರಿಗೂ ಬರಬಹುದು. ಏಕೀಕರಣ ಬೇಕಾದರೆ ಮಾಡಬೇಕಾದ ಕಾರ್ಯ ಬಹಳ ವಿದೆ. ನಾನಂತೂ ನನ್ನ ಪ್ರಾಣವನ್ನು ಬಲಿಯಾಗಿ ಕೊಡಲು ಸಿದ್ಧಳಿರುವೆನು" ಇಡೀ ಸಭೆ ಕಂಬನಿಗರೆಯಿತು. ಕನ್ನಡತಿಯೊಬ್ಬಳ ಕೆಚ್ಚು ಕಂಡರು.

೧೯೫೩ ರಲ್ಲಿ ಕರ್ನಾಟಕ ಏಕೀಕರಣ ಸಲುವಾಗಿ **ಅದರಗುಂಚಿ ಶಂಕರ ಗೌಡರು** ಆಮರಣ ಉಪವಾಸ ಕುಳಿತರು. ತಾಯಿಯವರು ತಮ್ಮ 'ರಕ್ತ ಚಿನ್ಹಾಂಕಿತ ಪತ್ರ' ಕಳಿಸಿದರು. ಎರಡನೇ ಸಲ ಅವರು ಹಂಪೆಯಲ್ಲಿ ಉಪವಾಸ ಕುಳಿತಾಗ, ಸ್ವತಃ ತಾಯಿಯವರು ಅಲ್ಲಿಗೆ ಹೋಗಿ, ಹಣ್ಣಿನ ರಸ ಕುಡಿಸಿ ಉಪವಾಸ ಬಿಡಿಸಿದರು. ೧೯೫೩ ರಲ್ಲಿ ನೆಹರೂ ಅವರು 'ರಾಜ್ಯ ಪುನರ್ ವಿಂಗಡಣಾ ಆಯೋಗ' ನೇಮಕ ಮಾಡಿದರು. **ಫಜಲ್ ಅಲಿ ಸಮಿತಿ** ಬಂದಿತು. ತಾಯಿಯವರು ಮನವಿ ಸಲ್ಲಿಸಿದರು. ಸೊಲ್ಲಾಪುರ ದಲ್ಲಿ ಶ್ರೀ ಸಿದ್ಧನಾಥ ಬಳ್ಳಾರಿ, ಶ್ರೀ ಚೆನ್ನವೀರ ಕಲ್ಯಾಣಶೆಟ್ಟಿ ಮುಂತಾದವರು ಕನ್ನಡ ಏಕೀಕರಣಕ್ಕಾಗಿ, ಗಡಿನಾಡನ್ನು ಒಳನಾಡಿನಲ್ಲಿ ಸೇರಿಸುವುದಕ್ಕಾಗಿ ಶ್ರಮಿಸಿದರು.

೧೯೫೫ ರಲ್ಲಿ ತಾಯಿಯವರು ಕರ್ನಾಟಕ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷೆಯಾಗಿ ನಾಮಕರಣಗೊಂಡಿದ್ದರು.

ಫಜಲ್ ಅಲಿ ಸಮಿತಿಯ ಆಧಾರದ ಮೇಲೆ (೧೯೫೫), ಹೊಸ ಮೈಸೂರು ರಾಜ್ಯ ಎಂದು ಕರೆಯಲಾಯಿತು. ಮೈಸೂರಿನ ರಾಜ ಜಯಚಾಮರಾಜೇಂದ್ರರು ರಾಜ್ಯಪಾಲರಾದರು. ನವೆಂಬರ ೧, ೧೯೫೬ ರಂದು 'ವಿಶಾಲ ಮೈಸೂರು ರಾಜ್ಯ' ಅಸ್ತಿತ್ವಕ್ಕೆ ಬಂದಿತು. ಶ್ರೀಮಾನ್ ಎಸ್. ನಿಜಲಿಂಗಪ್ಪನವರು ಪ್ರಥಮ ಮುಖ್ಯಮಂತ್ರಿಯಾದರು.

'ನವ ಮೈಸೂರು ರಾಜ್ಯ' ದಲ್ಲಿ ಕೈಬಿಟ್ಟ ಕನ್ನಡದ ಭಾಗಗಳಾಗಿಅಂದರೆ ಸೊಲ್ಲಾಪುರ, ಜತ್, ಅಕ್ಕಲಕೋಟ, ಉದಗೀರ, ಕಾಸರಗೋಡ, ಆದವಾನಿ, ರಾಯದುರ್ಗ ಮುಂತಾದುವುಗಳು ಕರ್ನಾಟಕದಲ್ಲಿ ಸೇರಬೇಕೆಂದು ಉಗ್ರ ಪ್ರತಿಭಟನೆ ಸಲ್ಲಿಸಿದರು ಜಯದೇವಿ ತಾಯಿಯವರು.

೧೫-೧೦-೧೯೬೬ ರಲ್ಲಿ ಮೈಸೂರು-ಮಹಾರಾಷ್ಟ್ರ-ಕೇರಳ ಗಡಿಭಾಗಗಳ ಅಧ್ಯಯನಕ್ಕೆ ಸರಕಾರ ಏಕ ಸದಸ್ಯ ಆಯೋಗ ನೇಮಿಸಿದ್ದು ಅದು ಏಕ ಪಕ್ಷೀಯವೆಂದು ಕರ್ನಾಟಕ ಜನತೆ ಆಂದೋಲನಕ್ಕಿಳಿದಾಗ ಜಯದೇವಿತಾಯಿ ಅವರು ಅದರ ನೇತೃತ್ವ ವಹಿಸಿದರು.

ತಾಯಿಯವರು ಬೆಂಗಳೂರಿನಲ್ಲಿ ಬೃಹತ್ ಮೆರವಣಿಗೆ ನಡೆಸಿ, ನಿಜಲಿಂಗಪ್ಪನವರಿಗೆ ಮನವಿ ಅರ್ಪಿಸಿ, ಅವರಿಂದ ಮಾತು ತೆಗೆದುಕೊಂಡರು. ಈ ಆಯೋಗದ ನಿರ್ಣಯವು ಮಹಾರಾಷ್ಟ್ರದ ಪರವಾಗಿರಲಿಲ್ಲವೆಂದು ಕೇಂದ್ರದಿಂದ ಅದು ಸ್ವೀಕೃತವಾಗದೇ ಹೋಯಿತು. ಮಹಾಜನ ಆಯೋಗವು ಸೊಲ್ಲಾಪುರವನ್ನು ಕರ್ನಾಟಕದಲ್ಲಿ ಸೇರ್ಪಡೆ ಮಾಡಿಕೊಂಡ ಕಾರಣ, ಈ ವರದಿಯನ್ನು ಬೇಗನೇ ಜಾರಿಗೆ ತರಬೇಕೆಂದು ತಾಯಿಯವರು ಇಂದಿರಾಗಾಂಧಿಯವರಿಗೂ ಮನವಿ ಅರ್ಪಿಸಿದರು. ಅದೂ ಈಡೇರಲಿಲ್ಲ.

೧೯೭೩ ನವೆಂಬರ ೧ ರಂದು 'ಮೈಸೂರು ರಾಜ್ಯ' ಹೆಸರು ಬದಲಾಗಿ **'ಕರ್ನಾಟಕ ರಾಜ್ಯ'** ಎಂದು ಪುನರ್‌ನಾಮಕರಣವಾದಾಗ ತಾಯಿಯವರಿಗೆ ಸ್ವಲ್ಪ ಮಟ್ಟಿಗೆ ಸಮಾಧಾನವಾಯಿತು. ಆದರೂ ಅವರ ಆಂತರಿಕ ಹಂಬಲ ಹಾಗೆಯೇ ಉಳಿಯಿತು.

೨೫. ಮಂಡ್ಯದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದದ್ದು :

೧೯೭೪ ರಲ್ಲಿ ಮಂಡ್ಯದಲ್ಲಿ ನಡೆದ ಅಖಿಲ ಭಾರತ ೪೮ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಸರ್ವಾನುಮತದಿಂದ, ಅವಿರೋಧವಾಗಿ ಆಯ್ಕೆಗೊಂಡು ವಿದ್ವತ್ಪೂರ್ಣ, ಕನ್ನಡ ನಾಡು-ನುಡಿಯ ಬಗ್ಗೆ ಉದ್ಬೋಧಕ ಭಾಷಣ ಮಾಡಿದರು- "ಇಂದು ನಮ್ಮ ಕನ್ನಡ ನಾಡು ತನ್ನ ಪ್ರಾಚೀನವಾದ ಕರ್ನಾಟಕ ಎನ್ನುವ ಐತಿಹಾಸಿಕ ಹೆಸರು ಪಡೆದು ಕನ್ನಡಿಗರೆಲ್ಲರ ಮೈಮನಗಳಲ್ಲಿ ತನ್ನತನವನ್ನು ಮೂಡಿಸಿದೆ. ಮೈಸೂರು ಇಂದು ಕರ್ನಾಟಕವಾಯಿತು ಎನ್ನುವಾಗ ಕಳೆದ ನಾಲ್ಕು ದಶಕಗಳ ಚಿತ್ರ ನಮ್ಮ ಕಣ್ಣೆದುರು ಮೂಡಿನಿಲ್ಲುತ್ತದೆ. ನನ್ನ ಜೀವಮಾನದ ಕೊನೆಯುಸಿರು ಇರುವವರೆಗೆ ಕನ್ನಡ ಕ್ಕಾಗಿಯೇ ದುಡಿಯುವೆ, ಕನ್ನಡಕ್ಕಾಗಿಯೇ ಬದುಕುವೆ. 'ಕನ್ನಡವೇ ನನ್ನ ಧರ್ಮ' ಎಂದು ಘೋಷಿಸೋಣ. ಸಾಹಿತಿಯಾದವನಿಗೆ ಸಾಮಾಜಿಕ ಪ್ರಜ್ಞೆ ಇರಲೇಬೇಕು. ಹಸಿರು ಕ್ರಾಂತಿ ಆಂದೋಲನ ಪ್ರಾರಂಭಿಸಿದಂತೆಯೇ ಅಕ್ಷರ ಕ್ರಾಂತಿಯ ಆಂದೋಲನವನ್ನು ಪ್ರಾರಂಭಿಸಬೇಕು"

೨೬. ಕರ್ನಾಟಕ ವಿಶ್ವವಿದ್ಯಾಲಯದಿಂದ ಡಿ.ಲಿಟ್. ಪದವಿ :

ಕರ್ನಾಟಕ ವಿಶ್ವವಿದ್ಯಾಲಯವು ೧೭-೧೨-೧೯೭೬ ರಂದು ಜಯದೇವಿ ತಾಯಿ ಲಿಗಾಡೆಯವರ ಜೀವನ-ಸಾಧನೆ-ಸಾಹಿತ್ಯ-ಸಂಸ್ಕೃತಿ-ನಾಡು-ನುಡಿ-ಗಡಿ ಭಾಗದ ಹೋರಾಟ ಮುಂತಾದ ಸಾಧನೆಯನ್ನು ಗೌರವಿಸಿ ಡಾಕ್ಟರೇಟ್ ಪದವಿಯನ್ನು (ಡಿ.ಲಿಟ್) ನೀಡಿ ಗೌರವಿಸಿತು. ಬಯಸದೇ ಬಂದುದು ಲಿಂಗಪ್ರಸಾದವೆಂದು ತಾಯಿ ಯವರು ಸ್ವೀಕರಿಸಿದರು.

೨೭. ಜಾನಪದ ಸಮ್ಮೇಲನಾಧ್ಯಕ್ಷರು :

೧೯೭೬ ಡಿಸೆಂಬರ ೨೭ ಕರ್ನಾಟಕ ವಿಶ್ವವಿದ್ಯಾಲದಲ್ಲಿ ಜರುಗಿದ ಜಾನಪದ ಸಮ್ಮೇಲನದ ಅಧ್ಯಕ್ಷರಾಗಿ ತಾಯಿಯವರು ಅನುಭಾವ ಪೂರ್ಣ ಉಪನ್ಯಾಸ-ಭಾಷಣ ಮಾಡಿದರು. (ಈ ಸಮ್ಮೇಳನದಲ್ಲಿ ವಿದ್ಯಾರ್ಥಿಗಳಾಗಿದ್ದ ನಾವು ಭಾಗವಹಿಸಿದ್ದೆವು)

೨೮. ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯತ್ವ :

೧೯೭೭ ರಲ್ಲಿ ಕರ್ನಾಟಕ ರಾಜ್ಯ ಸರಕಾರದಿಂದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ ನಾಮಕರಣಗೊಂಡರು.

೨೯. ಶರಣ ಫ.ಗು. ಹಳಕಟ್ಟಿ ಶತಮಾನೋತ್ಸವ ಸಮಿತಿಯ ಉಪಾಧ್ಯಕ್ಷರಾಗಿದ್ದು :

೧೯೭೯-೮೦ ರಲ್ಲಿ ಧಾರವಾಡದ ಬಸವತತ್ವ ಪ್ರಸಾರ ಸಂಸ್ಥೆಯ ವತಿಯಿಂದ ಕರ್ನಾಟಕ ರಾಜ್ಯಮಟ್ಟದಲ್ಲಿ ವಚನ ಪಿತಾಮಹ ಶರಣ ಫ.ಗು. ಹಳಕಟ್ಟಿಯವರ ಶತಮಾನೋತ್ಸವ ಆಚರಿಸಲು ನಿರ್ಧರಿಸಿದಾಗ, ಶ್ರೀ ಚಂದ್ರಕಾಂತ ಬೆಲ್ಲದ, ಪ್ರೊ. ಸಿದ್ಧಣ್ಣ ಲಂಗೋಟಿ, ಶ್ರೀ ಎಸ್. ಕೆ. ಚರಂತಿಮಠ, ಪ್ರೊ. ಎಸ್. ವ್ಹಿ. ಪಾಟೀಲ ಮುಂತಾದವರ ವಿನಂತಿಯ ಮೇರೆಗೆ ತಾಯಿಯವರು ಈ ಸಮಿತಿಗೆ ಉಪಾಧ್ಯಕ್ಷರಾಗಿ ಒಪ್ಪಿಗೆ ನೀಡಿದರು. ಶ್ರೀ ಪಾಟೀಲ ಪುಟ್ಟಪ್ಪನವರು ಅಧ್ಯಕ್ಷರಾಗಿದ್ದರು.

೩೦. ಜಯದೇವಿತಾಯಿಯವರ ವ್ಯಕ್ತಿತ್ವ ದರ್ಶನದ ಘಟನೆ :

ಪೂಜ್ಯ ಜಯದೇವಿತಾಯಿಯವರು ಭಕ್ತಿಯೇ ರೂಪಾಗಿ ನಿಂತ ಸಾತ್ವಿಕ ಶರಣ ವ್ಯಕ್ತಿತ್ವ. ಹಣೆಯ ಮೇಲೆ ಶುಭ್ರವಾದ ಮೂರು ಬೆರಳು ವಿಭೂತಿ, ಕೊರಳಲ್ಲಿ ಇಷ್ಟಲಿಂಗ, ರುದ್ರಾಕ್ಷಿಸರ, ಕೈಗಳಲ್ಲಿ ರುದ್ರಾಕ್ಷಿ, ಕಂಕಣ, ಸರಳವಾದ ಬಿಳಿಯ ಶುಭ್ರ ಸೀರೆ, ಸುಂದರ ಮುಖಕಮಲ, ವಿಶಾಲ ಕಂಗಳು, ಶಿವಯೋಗದಿಂದ ಕಾಂತಿಯುತವಾದ ಪ್ರೇಮದ ದೃಷ್ಟಿ, ಸದಾ ಹಸನ್ಮುಖಿ, ನುಡಿದರೆ ಲಿಂಗಮೆಚ್ಚಿ ಅಹುದಹುದೆನ್ನುವ ವಚನವಾಣಿ.

೧೯೭೯ ರಲ್ಲಿ ಧಾರವಾಡದಿಂದ ಬಸವತತ್ವ ಪ್ರಸಾರ ಸಂಸ್ಥೆಯ ಸ್ಥಾಪಕ ಸದಸ್ಯರು ಸೊಲ್ಲಾಪುರಕ್ಕೆ ತಾಯಿಯವರ ದರ್ಶನಕ್ಕೆ ಬಂದಾಗ್ಗೆ, ತಾಯಿಯವರು ಬೆಳಿಗ್ಗೆ ಪೂಜಾಕೋಣೆಯಲ್ಲಿ ಶಿವಯೋಗದಲ್ಲಿ ನಿರತರಾಗಿದ್ದರು. ಈ ಬಸವಬಳಗ ಕಲ್ಯಾಣಕ್ಕೆ ಹೊರಟಿತ್ತು. ಸಮಯದ ಅಭಾವ, ತಾಯಿಯವರು ಪೂಜಾಕೋಣೆಯಿಂದ ಹೊರಬರಲು ಇನ್ನೂ ಎರಡು-ಮೂರು ಗಂಟೆಯಾಗುತ್ತದೆ ಎಂದು ತಿಳಿದಾಗ, ಪ್ರೊ ಸಿದ್ಧಣ್ಣ ಲಂಗೋಟಿಯವರು- ತಮ್ಮ ಜತೆಗಿದ್ದ ಹಿರಿಯರಿಗೆ- 'ಕಣ್ಣರಿಯದಿದ್ದರೂ ಕರುಳರಿಯಬಾರದೆ ? ತಾಯಿಯಲ್ಲಿ ಶಕ್ತಿ ಇದ್ದರೆ ಈಗ ಬಂದು ದರ್ಶನ ನೀಡುವರು, ಇಲ್ಲದಿದ್ದರೆ ನಾವು ಕಲ್ಯಾಣಕ್ಕೆ ಹೊರಡೋಣ' ಎಂದರಂತೆ, ಒಂದೆರಡು ನಿಮಿಷದಲ್ಲಿ ದಿವ್ಯ ಕಳೆಯ ತಾಯಿಯವರು ಅಂಗೈಯಲ್ಲಿ ಲಿಂಗ ಹಿಡಿದುಕೊಂಡೇ ಪೂಜಾಕೋಣೆಯಿಂದ ಎದ್ದು ಬಂದು, ದರ್ಶನ ನೀಡಿ ಹಳಕಟ್ಟಿ ಶರಣರ ಶತಮಾನೋತ್ಸವ ವೈಭವದಿಂದ ಆಚರಿಸಿರೆಂದು ಆಶೀರ್ವಾದ ಮಾಡಿದರಂತೆ. 'ಜಂಗಮವು ಮನೆಗೆ ಬರಲೆಂದು ಲಿಂಗವ ಪೂಜಿ

ಸುವೆನಯ್ಯಾ' ಎಂಬ ಬಸವ ಗುರುವಾಣಿ ತಾಯಿಯವರಲ್ಲಿ ಸಾಕಾರಗೊಂಡಿತ್ತು. ಎಂಬುದನ್ನು ಕಾಣುತ್ತೇವೆ.

೩೧. ಜಯದೇವಿತಾಯಿ ಕಲ್ಯಾಣಕ್ಕೆ ಬಂದುದು :

'ಬಸವಕಲ್ಯಾಣ' ಸಮಸ್ತ ಲಿಂಗವಂತರ ಧರ್ಮಕೇಂದ್ರ. ೭೭೦ ಅಮರ ಗಣಂಗಳು ಬಾಳಿ-ಬದುಕಿದ ಕಾಯಕ ಭೂಮಿ, ಕಲ್ಯಾಣ ಕ್ರಾಂತಿಯ ಪವಿತ್ರನಾಡು. ಅನುಭವ ಮಂಟಪದ ಪ್ರಶಾಂತ ಪರಿಸರ. ತಾಯಿಯ ಹೃದಯದ ಹಂಬಲ- 'ಕಲ್ಯಾಣಕ್ಕೆ ಬಸವತಂದೆ ಕರೆಯುತ್ತಿದ್ದಾನೆ-ಸಿದ್ಧರಾಮ ಕರೆದೊಯ್ಯುತ್ತಿದ್ದಾನೆ' ಎಂದು ನವೆಂಬರ ೫, ೧೯೮೦ ಕ್ಕೆ ಆಗಮಿಸಿದರು.

ಬಂದೇವವ್ವ ತವರಿಗೆ ಬಸವತಂದೆ ಬಂದೇವವ್ವ ತವರೀಗೆ
ತಂದೆ-ತಾಯಂದಿರ ಬಳಗವು ಕಲ್ಯಾಣದಾಗ ॥

ಎಂದು ತಾಯಿ ಹೃದಯತುಂಬಿ ಹಾಡುತ್ತಾ ಕಲ್ಯಾಣಕ್ಕೆ ಆಗಮಿಸಿದರು.

೩೨. ನೂತನ ಅನುಭವ ಮಂಟಪದ ಉದ್ಘಾಟನೆ :

೧೯೮೦ ನವೆಂಬರದಲ್ಲಿ ನೂತನ ಅನುಭವ ಮಂಟಪದ ಉದ್ಘಾಟನೆಯಲ್ಲಿ ತೊಂಭತ್ತು ವರುಷದ ಪೂಜ್ಯ ಭಾಲ್ಕಿಯ ಚೆನ್ನಬಸವ ಪಟ್ಟದೇವರು, ವಿ. ಸಿದ್ಧರಾಮಣ್ಣ ಶರಣರು, ಬೆಲ್ದಾಳ ಶರಣರು, ಸಿದ್ಧಣ್ಣ ಲಂಗೋಟಿಯವರು, ಭೀಮಣ್ಣ ಖಂಡ್ರೆಯವರು ಇನ್ನೂ ಅನೇಕ ಶರಣರು ಪಾಲ್ಗೊಂಡಿದ್ದರು. ತಾಯಿಯವರು ಅನುಭವ ಮಂಟಪಕ್ಕೆ ಬಂದರು. ಬಾಗಿಲಲ್ಲಿ ಭಾಲ್ಕಿ ಅಪ್ಪಗಳು ಕೈಮುಗಿದು ತಲೆಬಾಗಿ ನಿಂತಿದ್ದರು. ತಾಯಿಯವರು ನಮಸ್ಕರಿಸಲು ಬಾಗಿದಾಗ, ಭಾಲ್ಕಿ ಅಪ್ಪಗಳು ಅವರಿಗಿಂತ ಮುಂಚೆಯೇ ಬಾಗಿದರು. ಆಗ ತಾಯಿಯವರು 'ಅಪ್ಪಾ ಅವರೇ ನಾನು ತಮ್ಮ ಮಗಳು, ತಾವು ಗುರುಗಳು, ಹಿರಿಯರು' ಎಂದರು. ಆಗ ಅಪ್ಪಗಳು- "ಅವ್ವಾ ಅವರೇ ಇಲ್ಲಿ ಯಾರೂ ಹಿರಿಯರಿಲ್ಲ. ಕಿರಿಯರಿಲ್ಲ, ನಾವೆಲ್ಲ ಅಪ್ಪ ಬಸವಣ್ಣನ ಮಕ್ಕಳು" ಎಂದಾಗ ಎಲ್ಲರ ಕಣ್ಣುಗಳಲ್ಲಿ ಆನಂದ ಭಾಷ್ಪ. ಇದನ್ನು ಕಂಡ ನಾನು ಧನ್ಯಳಾಗಿದ್ದೆ.

೩೩. ಸಾವಿರ ಜಂಗಮರ ಶಕ್ತಿ ಗುರುತಿಸಿದ್ದು :

ಅನುಭವಮಂಟಪದ ಸಂಚಾಲಕರೂ, ನಿರಂಜನ ಶರಣರೂ ಆಗಿರುವ ವಿ. ಸಿದ್ಧರಾಮಣ್ಣ ಶರಣರನ್ನು ಕಂಡು ತಾಯಿಯವರು ಹೃದಯತುಂಬಿ ಹೇಳಿದರು-

"ಶರಣರೆ ತಾವು ಸಾಮಾನ್ಯರಲ್ಲ, ತಮ್ಮಲ್ಲಿ ಸಾವಿರ ಜಂಗಮರ ಶಕ್ತಿ ಇದೆ" ಎಂದು ನುಡಿದರು.

೩೪. ಭಕ್ತಿ ಭವನದಲ್ಲಿ ಬಸವಶಕ್ತಿ :

ಪೂಜ್ಯ ತಾಯಿಯವರು ಅನುಭವ ಮಂಟಪದ ಪಕ್ಕದಲ್ಲಿಯೇ ಹತ್ತಾರು ಎಕರೆ ಜಮೀನು ಖರೀದಿಸಿ, ಭಕ್ತಿ ಭವನ ಕಟ್ಟಿಸಿ ಅಲ್ಲಿ ಅರ್ಚನೆ-ಅರ್ಪಣೆ- ಅನುಭಾವ ದಲ್ಲಿ ನಿರತರಾದರು. ಅವರೊಂದಿಗೆ ಕಿರಿಯ ಮಗಳು ಶರಣೆ ಲಲ್ಲೇಶ್ವರಿ ಮೂಗಿ, ಅಳಿಯ ಶಂಕರಣ್ಣ ಮೂಗಿ ಅವರು ನೆಲೆಸಿದರು. ಜನ ತಂಡೋಪ ತಂಡವಾಗಿ ತಾಯಿಯ ದರ್ಶನಕ್ಕೆ ಬರತೊಡಗಿದರು. ನಾವು (ಕಲ್ಯಾಣಮ್ಮ ಹಾಗೂ ಸಿದ್ಧಣ್ಣ ಲಂಗೋಟಿ) ಕಲ್ಯಾಣದ ಶರಣ ಕಮ್ಮಟಕ್ಕೆ ಪ್ರತಿವರುಷ ಹೋದಾಗಲೆಲ್ಲ ತಾಯಿಯ ವರಲ್ಲಿ ಭಕ್ತಿ ಭವನದಲ್ಲಿದ್ದು ಅವರ ದರ್ಶನ, ಅನುಭಾವ ಪಡೆಯುತ್ತಿದ್ದೆವು. ಅವರು ಬಸವಶಕ್ತಿ ಎಂದು ತಲೆಬಾಗುತ್ತಿದ್ದೆವು.

೩೫. ಬಸವ ಮಹಾಬಯಲಲ್ಲಿ ಬಯಲಾದ ತಾಯಿ :

ಮರ್ತ್ಯಲೋಕದ ಮಹಾ ಮಣಿಹ ಪೂರೈಸಿತೆಂದು ಕಾಣುತ್ತದೆ- ಪೂಜ್ಯ ತಾಯಿಯವರು ೧೯೮೬ ಜುಲೈ ತಿಂಗಳಲ್ಲಿ ದೈಹಿಕವಾಗಿ ಬಳಲಿದರು, ಅನಾರೋಗ್ಯಕ್ಕೆ ತುತ್ತಾದರು.

ಶರಣರ ಭೂಮ್ಯಾಗ ಮರಣವೇ ಲೇಸೆಂದು
ಹರಣದ ಹಂಗ ತೊರದೇನ। ಕಲ್ಯಾಣದ
ಶರಣರಿಗೆ ನೆನೆದೇನ ಮನದಾಗ ॥

ಎಂದು ಈ ಹಿಂದೆ ತಾವೇ ರಚಿಸಿ ಹಾಡಿದ ಪದದಂತೆ, ತಾಯಿಯವರು ಆಸ್ಪತ್ರೆಯಲ್ಲಿ ಜುಲೈ ೧೫, ೧೯೮೬ ಶುಕ್ರವಾರ ಬೆಳಿಗ್ಗೆ ಬಸವ ಮಹಾಬಯಲಿನಲ್ಲಿ 'ಬಸವಾ ಬಸವಾ' ಎನ್ನುತ್ತಾ ಬಯಲಾದರು. ಸಿದ್ಧರಾಮನ ಕರುಣೆಯ ಕೂಸು, ಕನ್ನಡದ ಶಕ್ತಿಯು ಬಸವ ಜ್ಯೋತಿಯಲ್ಲಿ ಬೆರೆದು ಒಂದಾಯಿತು.

ತಾಯಿಯವರು ಇಚ್ಛೆಯಂತೆಯೇ ಅವರ ಲಿಂಗದೇಹವನ್ನು ಬಸವ ಕಲ್ಯಾಣದ ಭಕ್ತಿ ಭವನದ ಪಕ್ಕದಲ್ಲಿ ಕ್ರಿಯಾಸಮಾಧಿ ಮಾಡಲಾಯಿತು. 'ಸಿದ್ಧಶೈಲ' ದಲ್ಲಿ ತಾಯಿಯವರ ಅಂತ್ಯಕ್ರಿಯೆ ಜರುಗಿತು.

೩೬. ಕನ್ನಡದ ಕವಿಗಳ-ಶರಣರ ದೃಷ್ಟಿಯಲ್ಲಿ ತಾಯಿಯವರು :

ತಾಯಿಯ ಛಲ ಬಂತು, ಕನ್ನಡಕೆ ಬಲ ಬಂತು,
ಗಡಿಯ ಕನ್ನಡಗರಿಗೆ ಗೆಲವು ಬಂತು !
ನಾಮದಲಿ ಹೆಂಗಸು ಭಾವಿಸಲು ಗಂಡಸು
ಕನ್ನಡದ ಸಿರಿಬೆಳಸು, ಕ್ರಾಂತಿಯ ಶಿಶು.

-ಡಾ ॥ ಸಿದ್ಧಯ್ಯ ಪುರಾಣಿಕ

ಗಡಿಯಲ್ಲಿ ಕಟ್ಟಿ ಕನ್ನಡದ ಕೋಟೆ, ಉಡಿಯಲ್ಲಿ
ಇಡಿಯ ನಾಡಕ್ಕರೆಯ ಮಕ್ಕಳಾಡುಂಬೊಲವೆ
ಒಡವೆಗಳನುಳಿದ ರುದ್ರಾಕ್ಷಿ ಕಂಕಣ ಬಲವೆ
ಇದ್ದಲ್ಲೆ ಮರಳಿ ಗೆದ್ದಿರಿ ತುತ್ತ ತುದಿಯಲ್ಲಿ

-ಶ್ರೀ ಚೆನ್ನವೀರ ಕಣವಿ

ಕನ್ನಡಮ್ಮನ ಕುವರಿ ಜಯದೇವಿಯರೆ
ನಿಮ್ಮ ನೆನೆಹದು ನಮಗೆ ಪುಣ್ಯಧಾಮ

-ಎಸ್. ಡಿ. ಇಂಚಲ

ಜಯಚೈತ್ರ ಬಂದಂತೆ ಅಕ್ಕ ಜಯದೇವಿಯರೆ
ಹೊನ್ನಾಡ ಸಿರಿಮುಡಿದು ಶಿವಗಂಗೆ ತಾಯಿಯವರೆ

-ಡಾ॥ ಸಿಂಪಿ ಲಿಂಗಣ್ಣ

ಒಬ್ಬ ಮಗುವಿನ ತಾಯಿ ಏನು ನೀನಿಂದು
ನಾಡಮಕ್ಕಳ ಮನಕೆ ಜನನಿ ನಿಜ ನೀನು.

-ಲಲ್ಲೇಶ್ವರಿ ಮೂಗಿ

ಸಿದ್ಧರಾಮನ ಮಗಳು ಶುದ್ಧ ಜೀವನದವಳು
ಉದ್ಧರಿಸಲೆಂದು ಕನ್ನಡಕೆ ದುಡಿವಳು

-ಡಾ॥ ಸಿ. ಪಿ. ಕೆ.

ನೀನಿಟ್ಟ ಹೆಜ್ಜೆಯಲಿ ನಗುನಗುತಲಿವೆ ಚಿಕ್ಕೆ
ಮಿಂಚು ಮಗಮಗಿಸುತಿದೆ ಮಾತಿನಲ್ಲಿ

-ಡಾ॥ ದೇವೇಂದ್ರಕುಮಾರ ಹಕಾರಿ

ನನ್ನ ದಾರಿಯಗುಂಟ ಕಂಡ ಮುಖಗಳ ಮೇಲೆ
ನಿತ್ಯ ಕಾಣುವುದೆನಗೆ ತಾಯಿ ಮಮತೆಯ ಲೀಲೆ

-ಬಿ. ಎ. ಸನದಿ, ಮುಂಬಯಿ

ನಿನಗ ಕಂಡಾಗಲೆಲ್ಲ ನನಗೆ ಆನಂದದಶ್ರುಧಾರೆ
ಕನ್ನಡವನುಳಿಸಿ ಬೆಳೆಸಲು ತಾಯೆ ಇನ್ನೊಮ್ಮೆ ಬಾರೆ

-ಡಾ॥ ಸರೋಜಿನಿ ಚವಲಾರ

ತಾಯೆ ! ನಿನ್ನ ಆ ಭವ್ಯ ನಿಲುವು, ಆ ಮೊಗದ ಚೆಲವು
ಅದೆಂತು ಬಣ್ಣಿಸಲಿ, ಇಲ್ಲ ಶಬ್ದ ಮುಗ್ಧ.

-ಎಚ್. ಎಸ್. ಮುಕ್ತಾಯಕ್ಕ

ನಿನ್ನ ಪುಣ್ಯ ಗರ್ಭದಿಂದ ಬಂದ ಭಾಗ್ಯ ನನ್ನದು
ನಿನ್ನ ಉಚ್ಛ ಸಂಸ್ಕೃತಿಯ ಪಡೆದ ಪುಣ್ಯ ನನ್ನದು

-ಶಶಿಕಲಾತಾಯಿ ಮಡಕಿ

ಸಿದ್ಧರಾಮನ ಕರುಣೆಯ ಕೂಸು ಜಯದೇವಿತಾಯೆ
ಕಲ್ಯಾಣ ಶರಣರ ಮಹಾಮನೆಯ ಮಗಳೇ
ಬಸವಗುರುವಿನ ಮಹಾಮಣಿಹ ಪೂರೈಸ ಬಂದೆಯಾ
ನಾಡ ಶಿಶುಗಳಿಗೆಲ್ಲ ಭಕ್ತಿರಸವ ಕುಡಿಸಲ್ಕೆ ತಂದೆಯಾ

-ಸಿದ್ಧಣ್ಣ ಲಂಗೋಟಿ

ಹೇಗೆ ತೀರಸಬೇಕು ತಾಯೆ ನಿನ್ನ ಋಣವ ಒಟ್ಟು
ನೆನೆವೆವು ಹಡೆದ ಮಕ್ಕಳಿಗೆ ನಿನ್ನ ಹೆಸರಿಟ್ಟು

-ಎಸ್. ಚಂದರಕಿ

೩೮. ಗ್ರಂಥ ಋಣ

೧. ಜಯದೇವಿತಾಯಿ ಲಿಗಾಡೆ- ಡಾ॥ ಸರೋಜಿನಿ ಪಾಂ. ಚವಲಾರ (ಬದುಕು-ಬರಹ-ಸಾಧನೆ ಪಿ.ಎಚ್.ಡಿ. ಮಹಾಪ್ರಬಂಧ)

೨. ಜಯದೇವಿತಾಯಿಯವರು - ಡಾ॥ ಸರೋಜಿನಿ ಚವಲಾರ

೩. ಜಯದೇವಿತಾಯಿ (ಸಂಭಾವನಾ ಗ್ರಂಥ) - ಸಂ. ಸೂರ್ಯನಾರಾಯಣ ಚಡಗ

೪. ಮಹಾಕವಯಿತ್ರಿ ಜಯದೇವಿತಾಯಿ - ಬಿ. ಎಸ್. ಸ್ವಾಮಿ

೫. ಸಿದ್ಧರಾಮ ಸಾಹಿತ್ಯ ಸಂಗ್ರಹ - ಸಂ. ಚೆನ್ನಪ್ಪ ಉತ್ತಂಗಿ

೬. ಜಯದೇವಿತಾಯಿ ಲಿಗಾಡೆ - ಡಾ॥ ಚೆನ್ನಾಂಬಿಕಾ ಪಾವಟೆ

೭. ತಾಯಿ ನಿನ್ನ ನೆನಪು ಏನೆಂಥ ಸೈಪು- ಸಂ. ಎಂ. ಜಿ. ಗಂಗನಪಳ್ಳಿ

೮. ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು (ಸಂ ೪) -ಹಂಪ. ನಾಗರಾಜಯ್ಯ

೯. ಯುಗಪುರುಷ ಚೆನ್ನಬಸವ ಪಟ್ಟದೇವರು - ಪ್ರೊ. ಸಿದ್ಧಣ್ಣ ಲಂಗೋಟಿ

೧೦. ಶರಣ ಫ. ಗು. ಪಳಕಟ್ಟಿಯವರು - ಪ್ರೊ. ಸಿದ್ಧಣ್ಣ ಲಂಗೋಟಿ

೧೧. ಶರಣ ಹರ್ಡೇಕರ ಮಂಜಪ್ಪನವರು - ಪ್ರೊ. ಸಿದ್ಧಣ್ಣ ಲಂಗೋಟಿ

೧೨. ಜಯದೇವಿತಾಯಿಯವರು ಬರೆದ ಕನ್ನಡ-ಮರಾಠಿ ಗ್ರಂಥಗಳು

೧೩. ಜಯದೇವಿತಾಯಿಯವರ ಭಾಷಣಗಳು (ಪ್ರಕಟಿತ)

೧೪. ಶಶಿಕಲಾತಾಯಿ ಮಡಕಿ ಬರೆದ ಡಾ॥ ಜಯದೇವಿತಾಯಿಯಾಂಚೆ ಜೀವನ (ಮರಾಠಿ ಲೇಖನ)

೧೫. ವೀರದಾಸೋಹಿ - ಲಲ್ಲೇಶ್ವರಿ ಮೂಗಿ

೧೬. ಕನ್ನಡ-ಮರಾಠಿಯ ದಿನಪತ್ರಿಕೆ, ವಾರಪತ್ರಿಕೆ, ಪಾಕ್ಷಿಕ, ಮಾಸಿಕಗಳ ಲೇಖನಗಳು

೧೭. ಸೊಲ್ಲಾಪುರದ ಲಿಗಾಡೆ, ಮಡಕಿ, ವಾರದ ಮನೆತನಗಳ ಬಂಧುಗಳೊಂದಿಗೆ ಚರ್ಚಿಸಿದ್ದು. (ಶರಣೆ ಶಶಿಕಲಾತಾಯಿ ಮಡಕಿ ದಂಪತಿಗಳು ಹಾಗೂ ಶ್ರೀಮತಿ ಶೈಲಜಾ ಲಿಗಾಡೆ)

೧೮. ಬಸವಕಲ್ಯಾಣದ ಅನುಭವ ಮಂಟಪದ ವಿ. ಸಿದ್ಧರಾಮಣ್ಣ ಶರಣರೊಂದಿಗೆ ಚರ್ಚಿಸಿದ್ದು ಹಾಗೂ ನನ್ನ ತಂದೆ ಶ್ರೀ ಹಾವಪ್ಪ ಮಾಸ್ತರ ಕೋಟಿ ಹೇಳಿದ ಘಟನೆಗಳು.

೧೯. ೧೯೭೦ ರಿಂದ ತಾಯಿಯವರ ಸಂಪರ್ಕ, ಒಡನಾಟದಲ್ಲಿ ಕೇಳಿ ತಿಳಿದ ಸಂಗತಿಗಳು

೨೦. ಹಿರಿಯ ಲೇಖಕಿ ಡಾ॥ ಸರೋಜಿನಿ ಚವಲಾರ ಅವರಿಂದ ತಿಳಿದು ಬಂದ ವಿಚಾರಗಳು

೨೧. ಶ್ರೀ ಸಿದ್ಧಣ್ಣ ಲಂಗೋಟಿಯವರು ನೀಡಿದ ಮಾರ್ಗದರ್ಶನ, ಹಸ್ತಪ್ರತಿ ಸಿದ್ಧ ಪಡಿಸುವಲ್ಲಿ ಸಹಾಯ-ಸಹಕಾರ

ಮೇಲಿನ ಎಲ್ಲ ಗ್ರಂಥಗಳಿಗೂ ಗ್ರಂಥಕರ್ತರಿಗೂ ಚಿರಋಣಿಯಾಗಿದ್ದೇನೆ. ಸರ್ವರಿಗೂ ಶರಣು ಶರಣಾರ್ಥಿಗಳು - ಕಲ್ಯಾಣಮ್ಮ ಲಂಗೋಟಿ.

ಜಯದೇವಿ ತಾಯಿಗೆ ಶರಣು :

ಜಗಜ್ಯೋತಿ ಬಸವಣ್ಣನ ಮಗಳಾಗಿ, ಸೊನ್ನಲಿಗೆ-
ಯ ಶಿವಯೋಗಿ ಸಿದ್ಧರಾಮನ ಕರುಣೆಯ ಕೂಸಾಗಿ
ದೇವರ ಮನೆಯಾಗಿರುವ ಈ ಮರ್ತ್ಯಲೋಕದಲಿ
ವಿನಯವೇ ಮೂರ್ತಿವೆತ್ತಂತಿರುವ ಮಮತೆಯ
ತಾಯಿಯಾಗಿ ಕನ್ನಡದ ಮಕ್ಕಳಿಗೆ ಶುಭ ಹಾರ-
ಯಿಸುವ ಕನ್ನಡದ ಶಕ್ತಿಯೇ ನಿಮಗೆ ಶರಣ-ಶರಣಾರ್ಥಿ

-ಡಾ. ಕಲ್ಯಾಣಮ್ಮ ಲಂಗೋಟಿ

ಡಾ. ಕಲ್ಯಾಣಮ್ಮ ಲಂಗೋಟಿ ಅವರ ಸಾಹಿತ್ಯ ಕೃತಿಗಳು

೧.	ಮರಣವೇ ಮಹಾನವಮಿ	೧೯೭೯
೨.	ಗಣನಾಯಕ ಮಡಿವಾಳ ಮಾಚಿದೇವರು	೧೯೮೦
೩.	ಷಣ್ಮುಖ ಶಿವಯೋಗಿಗಳು ಕಂಡ ಬಸವಣ್ಣನವರು	೧೯೮೨
೪.	ಸಿದ್ಧಲಿಂಗೇಶ್ವರ ಕಂಡ ಬಸವಣ್ಣನವರು	೧೯೮೩
೫.	ಶರಣೆಯರ ವಚನಾಮೃತ (ಸಂಪಾದಿತ)	೧೯೮೫
೬.	ಅಕ್ಕಮಹಾದೇವಿ ವಚನಗಳು (ಸಂಪಾದಿತ)	೧೯೮೭
೭.	ಶರಣೆಯರ ವಚನಗಳು (ಸಂಪಾದಿತ)	೧೯೮೮
೮.	ದೇವದಾಸಿ ಪದ್ಧತಿ ವಿಮೋಚನೆ ಹಾಗೂ ಬಸವಣ್ಣನವರು	೧೯೮೯
೯.	ಸ್ವತಂತ್ರ ಸಿದ್ಧಲಿಂಗೇಶ್ವರ ವಚನಗಳು (ಸಂಪಾದಿತ)	೧೯೯೦
೧೦.	ನೀಲಾಂಬಿಕೆಯ ವಚನಗಳು (ಸಂಪಾದಿತ)	೧೯೯೩
೧೧.	ಸ್ತ್ರೀ ಸಂವೇದನೆಗಳು (ಕವನ ಸಂಗ್ರಹ)	೨೦೦೦
೧೨.	ಜಯದೇವಿತಾಯಿ ಲಿಗಾಡೆ	೨೦೦೨
೧೩.	ಕವಿಗಳು ಕಂಡ ಮಹಾಂತ ಶಿವಯೋಗಿಗಳು	೨೦೦೨
೧೪.	ಶರಣೆ ಹಡಪದ ಲಿಂಗಮ್ಮ	೨೦೦೫
೧೫.	ಬಸವಾದಿ ಶರಣರ ವಚನಾಂಕಿತಗಳು	೨೦೦೫
೧೬.	ರಾಷ್ಟ್ರಕವಿ ಜಿ. ಎಸ್. ಶಿವರುದ್ರಪ್ಪನವರು	೨೦೦೬
೧೭.	ವರಕವಿ- ಜಗದ ಕವಿ ಈಶ್ವರ ಸಣಕಲ್ಲರು	೨೦೦೮
೧೮.	ದಲಿತ ವಚನಕಾರ ಕುಮಾರ ಕಕ್ಕಯ್ಯಾ (ಮಹಾಪ್ರಬಂಧ)	೨೦೧೧
೧೯.	ಕಲ್ಯಾಣಮ್ಮ ಲಂಗೋಟಿ ವಚನಗಳು (ಅಪ್ರಕಟಿತ)	



(ಶ್ರೀಮತಿ) ಎಸ್.ಎಸ್. ಲಂಗೋಟಿ ಅವರು 'ಕಲ್ಯಾಣಮ್ಮ ಲಂಗೋಟಿ' ಎಂಬ ಕಾವ್ಯನಾಮದಿಂದ ಕನ್ನಡ ಸಾರಸ್ವತ ಲೋಕಕ್ಕೆ ಕವಯಿತ್ರಿಯಾಗಿ, ಆಧುನಿಕ ವಚನಕಾರ್ತಿಯಾಗಿ, ಗದ್ಯಲೇಖಕಿಯಾಗಿ ಚಿರಪರಿಚಿತರಾಗಿದ್ದಾರೆ.

ಕಲ್ಯಾಣನಾಡಿನ ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಬೀರಗಿ(ಬಿ) ಗ್ರಾಮದ ಶರಣದಂಪತಿಗಳಾದ ಶ್ರೀ ಹಾವಪ್ಪ ಮಾಸ್ತರ ಕೋಟೆಣ್ಣವರ ಹಾಗೂ ಶ್ರೀಮತಿ ಅನ್ನಪೂರ್ಣಮ್ಮನವರ ಉದರದಲ್ಲಿ (1956ರಲ್ಲಿ) ಜನಿಸಿ, ಬೀದರ ಜಿಲ್ಲೆಯಲ್ಲಿ ಕನ್ನಡ ಪ್ರಾಥಮಿಕ ಶಿಕ್ಷಣ, ಧಾರವಾಡದ ಬಾಸೆಲ್ ಮಿಶನ್ ಗರ್ಲ್ಸ ಹೈಸ್ಕೂಲಿನಲ್ಲಿ ಮಾಧ್ಯಮಿಕ ಶಿಕ್ಷಣ, ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಪದವಿ ಪೂರ್ವ ಹಾಗೂ ಪದವಿ ಶಿಕ್ಷಣ ಪಡೆದರು. ಅನಂತರ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಓದಿ ಎಂ.ಎ. ಕನ್ನಡ ಸ್ನಾತಕೋತ್ತರ ಪದವಿ (1979) ಪಡೆದು, ಬೆಳಗಾವಿ ಜಿಲ್ಲೆಯ ರಾಮದುರ್ಗದ ಸಿ.ಎಸ್. ಬೆಂಬಳಗಿ ಕಲಾ, ಶಾ. ಎಂ. ಆರ್.ಪಿ. ವಿಜ್ಞಾನ, ಜಿ.ಎಲ್.ರಾಠಿ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕಿಯಾಗಿ ಸೇವೆಗೆ ಸೇರಿದರು.

ಶ್ರೀಮತಿ ಎಸ್.ಎಸ್. ಲಂಗೋಟಿಯವರು ಕನ್ನಡ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸುತ್ತಲೇ ಡಾ.(ಶ್ರೀಮತಿ) ಸುಲೋಚನಾ ಸಂಗನಬಸವ ಮುಟ್ಟಿ ಅವರ ಮಾರ್ಗದರ್ಶನದಲ್ಲಿ ಆಧುನಿಕ ದಲಿತ ವಚನಕಾರ 'ಕುಮಾರ ಕಕ್ಕಯ್ಯನ ವಚನಗಳು: ಒಂದು ಅಧ್ಯಯನ' ಎಂಬ ವಿಷಯದಲ್ಲಿ ಸಂಶೋಧನಾ ಮಹಾಪ್ರಬಂಧ ಬರೆದು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ಪಿಎಚ್.ಡಿ ಪದವಿಯನ್ನು ಪಡೆದುಕೊಂಡಿದ್ದಾರೆ.

ರಾಮದುರ್ಗದ ಡಿಗ್ರಿ ಕಾಲೇಜಿನಲ್ಲಿ ಕಳೆದ 32 ವರುಷಗಳಿಂದ ಕನ್ನಡ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸುತ್ತಲೇ ಸಾಹಿತ್ಯ ಕೃಷಿ ಕೈಕೊಂಡು 18ಕ್ಕೂ ಮಿಕ್ಕಿ ಪುಸ್ತಕಗಳ ರಚನೆ ಹಾಗೂ ಸಂಪಾದನೆ ಮಾಡಿದ್ದಾರೆ. ಕನ್ನಡ ಸಾಹಿತ್ಯದ ಜೀವಾಳ, ಹೃದಯವೆನಿಸಿರುವ ವಚನ ಸಾಹಿತ್ಯವು ಇವರ ವಿಶೇಷ ಆಸಕ್ತಿಯ ಸಾಹಿತ್ಯ ಪ್ರಕಾರವಾಗಿದೆ. 'ಎನ್ನಯ್ಯ ಬಚ್ಚಬರಿಯ ಬಸವಣ್ಣ' ಎಂಬ ವಚನಾಂಕಿತದಲ್ಲಿ ನೂರಾರು ವಚನಗಳನ್ನು ಬರೆದು ಆಧುನಿಕ ವಚನಕಾರರಲ್ಲಿ ಹೆಸರು ಸಂಪಾದಿಸಿದ್ದಾರೆ.

ಕ್ರಿ.ಶ. 2000 ಇಸ್ವಿಯಲ್ಲಿ ಜಗತ್ತಿನ ಪ್ರಮುಖ ದೇಶಗಳಾದ ಇಂಗ್ಲಂಡ, ಅಮೇರಿಕಾ, ವ್ಹೆಟಿಕನ್, ಫ್ರಾನ್ಸ್, ಇಟಲಿ, ಜರ್ಮನಿ, ಕೆನಡಾ, ಆಸ್ಟ್ರಿಯಾ, ಹಾಲಂಡ, ಸಿಂಗಾಪುರ ರಾಷ್ಟ್ರಗಳ ಪ್ರವಾಸ ಕೈಕೊಂಡು ಇಂಗ್ಲೆಂಡಿನಲ್ಲಿ ವಚನ ಸಾಹಿತ್ಯ ಹಾಗೂ ಸ್ತ್ರೀ ಸಮಾನತೆ ಕುರಿತು ಉಪನ್ಯಾಸ ನೀಡಿದ್ದಾರೆ. ತುಮಕೂರ ಹಾಗೂ ಶಿವಮೊಗ್ಗಗಳಲ್ಲಿ ಜರುಗಿದ ಅ.ಭಾ.ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಷಣ, ವಚನ ವಾಚನ ಮಾಡಿದ್ದಾರೆ. ಗಡಿನಾಡು ಉತ್ಸವದಲ್ಲಿ ಲೇಖಕಿ ಪ್ರಶಸ್ತಿ, ರಾಜ್ಯಮಟ್ಟದ 'ಲಚ್ಚಿಯಬ್ಬರಸಿ ಪ್ರಶಸ್ತಿ' ಶರಣ ಅಂಬಿಗಚೌಡಯ್ಯ ಗಣಾಚಾರ ಪ್ರಶಸ್ತಿ, ಬಸವ ಗುರುಕಾರುಣ್ಯ ಪ್ರಶಸ್ತಿ, ಶರಣದಾಂಪತ್ಯ ಪ್ರಶಸ್ತಿಗಳೊಂದಿಗೆ ಗೌರವಿಸಲ್ಪಟ್ಟಿದ್ದಾರೆ. ಆಕಾಶವಾಣಿಯಲ್ಲಿ ಅನೇಕ ಚಿಂತನಗಳು ಪ್ರಸಾರವಾಗಿವೆ.

ಗದಗ–ಬೆಟಗೇರಿ

– ಅಂಬಿಗರ ಕುಮಾರ ಚೌಡಯ್ಯ
ಆಧುನಿಕ ವಚನಕಾರರು